ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ

KARNATAKA SKILL DEVELOPMENT CORPORATION

SANKALP
Ministry of Skill Development & Entrepreneurship

ESSCI
Skilling India in Electronics

ಮಾದರಿ ಪಠ್ಯಕ್ರಮ

MODEL CURRICULUM

ಕ್ಷೇತ್ರ ತಂತ್ರಜ್ಞ (ಫೀಲ್ಡ್ ಟೆಕ್ನೀಶಿಯನ್) ಕಂಪ್ಯೂಟಿಂಗ್ ಮತ್ತು ಪೆರಿಫೆರಲ್ಸ್

Field Technician (Computing and Peripherals)

ಡಾ: ಅಶ್ವಥ್ ನಾರಾಯಣ ಸಿ.ಎನ್.
ಉನ್ನತ ಶಿಕ್ಷಣ, ಐಟಿ–ಬಿಟಿ, ವಿಜ್ಞಾನ ಮತ್ತು
ತಂತ್ರಜ್ಞಾನ, ವಿದ್ಯುನ್ಮಾನ, ಮತ್ತು ಕೌಶಲ್ಯಾಭಿವೃದ್ಧಿ,
ಜೀವನೋಪಾಯ ಹಾಗೂ ಉದ್ಯಮಶೀಲತೆ ಸಚಿವರು
ಮತ್ತು ರಾಮನಗರ ಜಿಲ್ಲಾ ಉಸ್ತುವಾರಿ ಸಚಿವರು

ಕೊಠಡಿ ಸಂಖ್ಯೆ 242–243
2ನೇ ಮಹಡಿ, ವಿಕಾಸಸೌಧ
ಬೆಂಗಳೂರು – 560 001
ದೂರವಾಣಿ ಸಂಖ್ಯೆ : 080–22258965
: 080–22034647

ಸಂಖ್ಯೆ:ಉಶಿ,ಐಟಿ&ಬಿಟಿ,ವಿ&ತಂ,ಕೌಅಸ/1016 /2021–22

ದಿನಾಂಕ: 14.06.2022

ಶುಭ ಸಂದೇಶ

ಕರ್ನಾಟಕ ಸರ್ಕಾರ ಕೌಶಲ್ಯ ಅಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಮಹಾತ್ವಾಕಾಂಕ್ಷೆಯ ಯೋಜನೆಯಾದ ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆಯಡಿಯಲ್ಲಿ (CMKKY) ಒಂದು ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು, ನೂರಕ್ಕೂ ಅಧಿಕ ಉದ್ಯೋಗ ಪಾತ್ರಗಳು(job role) ತರಬೇತಿ ಪಡೆಯುತ್ತಿದ್ದಾರೆ. ಈ ಯೋಜನೆಯ ಪೂರ್ಣ ಫಲವನ್ನು ರಾಜ್ಯದ ಯುವಜನತೆಗೆ ತಲುಪಿಸುವ ಮಹತ್ತರ ಕಾರ್ಯಕ್ಕೆ ಸರ್ಕಾರವು ಮುಂದಾಗಿದೆ. ಈ ನಿಟ್ಟಿನಲ್ಲಿ ವಿಶ್ವಬ್ಯಾಂಕ್ ಪ್ರಾಯೋಜಿತ ಸಂಕಲ್ಪ (SANKALP) ಯೋಜನೆಯಡಿ ಸುಮಾರು 70 ಬೇಡಿಕೆಯಲ್ಲಿರುವ ಹಾಗೂ CMKKY ಯೋಜನೆಯಡಿ ಅಳವಡಿಸಿಕೊಂಡಿರುವ ಉದ್ಯೋಗ ಪಾತ್ರಗಳು (job role) ಪಠ್ಯಕ್ರಮವನ್ನು ಕನ್ನಡಕ್ಕೆ ಅನುವಾದಿಸಲಾಗಿದೆ. ಮಾತೃ ಭಾಷೆಗೆ ಅನುವಾದಗೊಂಡ ಈ ಪಠ್ಯಕ್ರಮವು ನಮ್ಮ ಕರ್ನಾಟಕದ ಯುವಶಕ್ತಿಯನ್ನು, ಅದರಲ್ಲೂ ಗ್ರಾಮೀಣ ಭಾಗದ ಯುವಜನರ ಕೌಶಲ್ಯತೆಯನ್ನ ವೃದ್ಧಿಸಿ, ಅವರ ಸರ್ವೋತೋಮುಖ ಅಭಿವೃದ್ಧಿಗೆ ನಾಂದಿ ಹಾಡುತ್ತದೆ ಎಂದು ನನಗೆ ಖಾತ್ರಿಯಿದೆ. ಅನುವಾದಗೊಂಡ ಈ ಪಠ್ಯಕ್ರಮದ ಉಪಯೋಗವನ್ನು ಮತ್ತಷ್ಟು ವಿದ್ಯಾರ್ಥಿಗಳು ಪಡೆದುಕೊಳ್ಳಲಿ ಎಂದು ಆಶಿಸುತ್ತೇನೆ.

(ಡಾ: ಅಶ್ವಥ್ ನಾರಾಯಣ ಸಿ.ಎನ್)

ಡಾ. ಎಸ್. ಸೆಲ್ವಕುಮಾರ್, ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿ

ಸ್ವಾತಂತ್ರ್ಯದ ಅಮೃತ ಮಹೋತ್ಸವ

ಕೌಶಲ್ಯ ಕರ್ನಾಟಕ

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ
ಕರ್ನಾಟಕ ಸರ್ಕಾರ

ಮುನ್ನುಡಿ

ಕರ್ನಾಟಕ ಸರ್ಕಾರದ ಕೌಶಲ್ಯ ಅಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯು, ರಾಜ್ಯದ ಯುವಜನತೆಗೆ ಕೈಗಾರಿಕೆಗಳ ಬೇಡಿಕೆ ಆಧಾರಿತ ಕೌಶಲ್ಯ ತರಬೇತಿಗಳನ್ನು ನೀಡುತ್ತಾ ಬಂದಿದೆ. ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟಿಗೆ ಒಳಪಟ್ಟ ಎಲ್ಲಾ ಜಾಬ್ ರೋಲ್‌ಗಳ (Job Roles) ವಿಷಯಸೂಚಿ ಹಾಗೂ ಪಠ್ಯಕ್ರಮವು ಆಂಗ್ಲ ಭಾಷೆಯಲ್ಲಿ ಪ್ರಕಟಿತವಾಗಿದೆ. ಇವುಗಳ ಪೈಕಿ ಗ್ರಾಮೀಣ ಪ್ರದೇಶದ ಯುವಜನತೆಗೆ ಅತ್ಯಂತ ಪರಿಣಾಮಕಾರಿಯಾಗಿ ಕೌಶಲ್ಯ ತರಬೇತಿಯನ್ನು ನೀಡುವ ಉದ್ದೇಶದಿಂದ 70 ಜಾಬ್ ರೋಲ್‌ಗಳ ವಿಷಯಸೂಚಿ ಹಾಗೂ ಪಠ್ಯಕ್ರಮವನ್ನು ವಿಶ್ವ ಬ್ಯಾಂಕ್ ನೆರವಿನ ಜೀವನೋಪಾಯ ಉನ್ನತಿಗಾಗಿ ಕೌಶಲ್ಯ ಮತ್ತು ಜ್ಞಾನಾರ್ಜನೆ (SANKALP) ಯೋಜನೆಯಡಿ ಕನ್ನಡ ಭಾಷೆಗೆ ಅನುವಾದಿಸಲಾಗಿದೆ.

ಅನುವಾದಿತ ಈ ವಿಷಯಸೂಚಿ ಹಾಗೂ ಪಠ್ಯಕ್ರಮದಿಂದ ರಾಜ್ಯದ ಮಹತ್ವಾಕಾಂಕ್ಷಿ ಯೋಜನೆಯಾದ ಮುಖ್ಯಮಂತ್ರಿ ಕೌಶಲ್ಯ ಕರ್ನಾಟಕ ಯೋಜನೆಯಡಿ ವಿವಿಧ ವೃತ್ತಿಗಳಲ್ಲಿ ಕೌಶಲ್ಯ ತರಬೇತಿ ಪಡೆದು ಉದ್ಯೋಗ ನಿಯುಕ್ತರಾಗಿ ಉತ್ತಮ ಫಲಶೃತಿ ಪಡೆಯಬಹುದೆಂದು ವಿಶ್ವಾಸಿಸುತ್ತಾ ಎಲ್ಲಾ ಆಕಾಂಕ್ಷಿಗಳಿಗೆ ಶುಭ ಕೋರುತ್ತೇನೆ.

(ಡಾ. ಎಸ್. ಸೆಲ್ವಕುಮಾರ್, ಭಾ.ಆ.ಸೇ.)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ.

ಕೊಠಡಿ ಸಂಖ್ಯೆ : 347, 2ನೇ ಹಂತ, 3ನೇ ಮಹಡಿ, ಬಹುಮಹಡಿ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001
ದೂರವಾಣಿ: ಕಛೇರಿ : 080-22253724, 22032996
ಇ-ಮೇಲ್ : acs.skill@karnataka.gov.in / Website : www.kaushalkar.com

Message

From

Chief Operating Officer Electronics Sector Skills council of India

The Electronics Sector Skills Council of India-ESSCI is happy to know the Karnataka Skill Development Corporation (KSDC), the nodal agency under the Department of Skill Development, Entrepreneurship and Livelihood, Government of Karnataka is building the Skill Development content in the local language.

This step will go a long way in creating aspirations among the rural youth of Karnataka and will ensure the benefits of skill development reaches to the grass root beneficiaries in state.

ESSCI has always been an active partner in all the skill development programmes of KSDC and are committed to support the organization with all content and material in required for skill development in electronics job roles and support the local youth of the state by creating livelihoods opportunities

The broad purpose of the Skill India Mission is to create a huge capacity of skilled manpower and making the material available in the local languages ensures the percolation of skill development to the remote villages and communities by removing language barriers and ensuring QP content and other material in their mother language.

We are very happy to offer our training programs in Kannada and will enthusiastically support all endeavours of KSDC in this regard

We wish KSDC the very best in their endeavours to bring skill development to the grass root level in Karnataka.

For Electronics Sector Skills Council of India

Sector Skills Council Of India New Delhi

Dr. Abhilasha Gaur
Chief Operating Officer

Electronic Sector Skills Council of India, ESC House, 2nd Floor, 155, Okhla Industrial Area- Phase III, New Delhi-110020, Office Phone # + 91 8447738501 CIN No.: U93000DL201NPL246447

ಮಾದರಿ ಪಠ್ಯಕ್ರಮ (ಮಾಡೆಲ್ ಕರಿಕಲಮ್)

ಕ್ಷೇತ್ರ ತಂತ್ರಜ್ಞ (ಫೀಲ್ಡ್ ಟೆಕ್ನೀಶಿಯನ್) – ಕಂಪ್ಯೂಟಿಂಗ್

ಮತ್ತು ಪೆರಿಫೆರಲ್ಸ್

ವಿಭಾಗ : ವಿದ್ಯುನ್ಮಾನ ಶಾಸ್ತ್ರ (ಎಲೆಕ್ಟ್ರಾನಿಕ್ಸ್)

ಉಪ ವಿಭಾಗ : ಐ ಟಿ ಯಂತ್ರಾಂಶ (ಐ ಟಿ ಹಾರ್ಡ್‌ವೇರ್)

ಉದ್ಯೋಗ : ಮಾರಾಟದ ನಂತರದ ದುರಸ್ತಿ ಬೆಂಬಲ (ಆಫ್ಟರ್ ಸೇಲ್ಸ್ ಸಪೋರ್ಟ್)

ಉಲ್ಲೇಖ ಐ ಡಿ : **ELE/Q4601 , ಆವೃತ್ತಿ 1.0**

NSQF ಹಂತ : 4

Certificate

COMPLIANCE TO
QUALIFICATION PACK – NATIONAL OCCUPATIONAL STANDARD

Is hereby issued by the

Electronics Sector Skills Council of India

for

Skilling Content : **Field Technician- Computing and Peripherals**

Complying to National Occupational Standards of

Job Role/QP : **Field Technician- Computing and Peripherals**, QP No : **ELE/Q4601 Level 4**

Date of Issuance : 08th May 2017
Valid up to* : 07th May 2018
*Valid upto the next QP Review Date or the date mentioned above (whichever is earlier)

Authorized Signatory
Electronics Sector Skills Council of India

ಪರಿವಿಡಿ

ಪಠ್ಯಕ್ರಮ 01

ಅನುಬಂಧ A : ತರಬೇತುದಾರರಿಗೆ ಇರಬೇಕಾದ ಪೂರ್ವಾಗತ್ಯತೆಗಳು (ಕನಿಷ್ಠ ಅವಶ್ಯಕತೆಗಳು) 07

ಅನುಬಂಧ B : ಮೌಲ್ಯಮಾಪನದ ಮಾನದಂಡಗಳು 08

ಕ್ಷೇತ್ರ ತಂತ್ರಜ್ಞ (ಫೀಲ್ಡ್ ಟೆಕ್ನೀಶಿಯನ್) – ಕಂಪ್ಯೂಟಿಂಗ್ ಮತ್ತು ಪೆರಿಫೆರಲ್ಸ್

ಪಠ್ಯಕ್ರಮ

ಈ ಪಠ್ಯವು "**ESSC**–ಎಲೆಕ್ಟ್ರಾನಿಕ್ ಸೆಕ್ಟರ್ ಸ್ಕಿಲ್ ಕೌನ್ಸಿಲ್" ಹೊರಡಿಸಿದ "ಕ್ಷೇತ್ರ ತಂತ್ರಜ್ಞ (ಫೀಲ್ಡ್ ಟೆಕ್ನೀಶಿಯನ್) – ಕಂಪ್ಯೂಟಿಂಗ್ ಮತ್ತು ಪೆರಿಫೆರಲ್ಸ್" ಅರ್ಹತಾ (ಕ್ವಾಲಿಫಿಕೇಷನ್) ಪ್ಯಾಕ್‌ನ **4** ರಲ್ಲಿ **4** ರಾಷ್ಟ್ರೀಯ ವೃತ್ತಿಪರ ಮಾನದಂಡಗಳನ್ನು (**NOS**) ಒಳಗೊಂಡಿದೆ.

ಕಾರ್ಯಕ್ರಮದ ಹೆಸರು	ಕ್ಷೇತ್ರ ತಂತ್ರಜ್ಞ (ಫೀಲ್ಡ್ ಟೆಕ್ನೀಶಿಯನ್)– ಕಂಪ್ಯೂಟಿಂಗ್ ಮತ್ತು ಪೆರಿಫೆರಲ್ಸ್
ಅರ್ಹತಾ (ಕ್ವಾಲಿಫಿಕೇಷನ್) ಪ್ಯಾಕ್ ಹೆಸರು ಮತ್ತು ಉಲ್ಲೇಖ ಐಡಿ	ELE/Q4601 *ಆವೃತ್ತಿ* 1.0
ಆವೃತ್ತಿ ಸಂಖ್ಯೆ	1.0 **ಆವೃತ್ತಿ ನವೀಕರಣ ದಿನಾಂಕ:** 07–May–2017
ತರಬೇತಿಗೆ ಬೇಕಾದ ಅಭ್ಯರ್ಥಿಯ ಕನಿಷ್ಠ ವಿದ್ಯಾರ್ಹತೆ	12 ನೇ ತರಗತಿ ಪಾಸ್ / ಡಿಪ್ಲೊಮಾ ಪದವೀಧರ
ತರಬೇತಿ ಫಲಿತಾಂಶಗಳು	**ಈ ತರಬೇತಿ ಕಾರ್ಯಕ್ರಮವನ್ನು ಪೂರ್ಣಗೊಳಿಸಿದ ನಂತರ, ಅಭ್ಯರ್ಥಿಗಳು ಈ ಕೆಳಕಂಡ ಕೌಶಲ್ಯಗಳು ಸಾಧ್ಯವಾಗುತ್ತದೆ:** • ಉತ್ತಮ ಪರಸ್ಪರ ಸಂಬಂಧಗಳನ್ನು ನಿರ್ಮಿಸುವ ಸಾಮರ್ಥ್ಯ, ಮತ್ತು ಗ್ರಾಹಕ ಕೇಂದ್ರಿತ ದೃಷ್ಟಿಕೋನ ಹೊಂದುವುದು. • ವಿಮರ್ಶಾತ್ಮಕ ಚಿಂತನೆಯನ್ನು ಬೆಳೆಸಿಕೊಳ್ಳುವುದು ಮತ್ತು ಮೂಲ ಕಾರಣ ವಿಶ್ಲೇಷಣೆ ನಡೆಸುವುದು (ರೂಟ್ ಕಾಸ್ ಅನಾಲಿಸಿಸ್) – ಸಮಸ್ಯೆ ಪರಿಹರಿಸುವ ಸಾಮರ್ಥ್ಯ • ವ್ಯವಹಾರ ಸಂವಹನ, ಇ–ಮೇಲ್ ಬಳಸುವ ರೀತಿ ನೀತಿಗಳು • ವರದಿ ಮತ್ತು ದಾಖಲೆ ಮಾಡಲು ಮೈಕ್ರೋಸಾಫ್ಟ್ ಆಫೀಸ್ ಪ್ಯಾಕೇಜ್‌ನೊಂದಿಗೆ ಕೆಲಸ ಮಾಡುವುದು – ಎಂ ಎಸ್ ವರ್ಡ್, ಎಕ್ಸೆಲ್, ಪವರ್ ಪಾಯಿಂಟ್ (MS–Word , Excel, Power point). • ನೆಟ್‌ವರ್ಕಿಂಗ್, ಸರ್ವರ್‌ಗಳು ಮತ್ತು ಸ್ಟೋರೇಜ್ ಸಿಸ್ಟಮ್ ಗಳನ್ನು ಸ್ಥಾಪಿಸುವುದು (ಇನ್ಸ್ಟಾಲ್) ಮತ್ತು ಸಂರಚಿಸುವುದು (ಕಾನ್ಫಿಗರ್). • ಗ್ರಾಹಕರ ಫೀಲ್ಡ್ ಸರ್ವಿಸ್ ಕರೆಗಳಿಗೆ ಹಾಜರಾಗುವುದು ಮತ್ತು ಸಿಸ್ಟಮ್ ನಲ್ಲಿನ ಸಮಸ್ಯೆ ಪರಿಹರಿಸುವುದು ಮತ್ತು ರಿಪೇರಿ ದೂರುಗಳನ್ನು ನಿರ್ವಹಿಸುವುದು. • SLA ಮತ್ತು ಕಂಪನಿ ಪ್ರಕ್ರಿಯೆಗಳ ಮಹತ್ವವನ್ನು ತಿಳಿದುಕೊಳ್ಳುವುದು.

ಕ್ರಮ ಸಂಖ್ಯೆ	ಘಟಕ	ಕಲಿಕೆಯ ಪ್ರಮುಖ ಫಲಿತಾಂಶಗಳು	ಬೇಕಾದ ಪರಿಕರಗಳು
1	ಹಾರ್ಡ್‌ವೇರ್ ಪ್ರಮುಖ ಅಂಶಗಳು ಸಿದ್ಧಾಂತ (ಥಿಯರಿ) ತರಗತಿಯ ಅವಧಿ (hh:mm) 15:00 ಪ್ರಾಯೋಗಿಕ (ಪ್ರಾಕ್ಟಿಕಲ್) ತರಗತಿಯ ಅವಧಿ (hh:mm) 22:00 NOS ಗೆ ಸಂಬಂಧಿಸಿದ ಕೋಡ್ ELE/N4602 ELE/N4603	➢ ಕಂಪ್ಯೂಟರ್‌ನ ವಿಭಿನ್ನ ಘಟಕಗಳನ್ನು ಮತ್ತು ಸಿಸ್ಟಮ್ ಜೋಡಣೆ ವಿಧಾನವನ್ನು (ಅಸೆಂಬ್ಲಿ) ಅರ್ಥೈಸಿಕೊಳ್ಳುವುದು ➢ ಕಂಪ್ಯೂಟರ್ ಸಿಸ್ಟಮ್ ಸಮಸ್ಯೆ ಬಗೆಹರಿಸುವುದು. ➢ ಮದರ್ ಬೋರ್ಡ್ ನ ಲೇ ಔಟ್ , ಕಾಂಪೊನೆಂಟ್ಸ್ ಗಳು , ಫಾರ್ಮ್ ಫ್ಯಾಕ್ಟರ್ ಅನ್ನು ಅರ್ಥಮಾಡಿಕೊಳ್ಳುವುದು. ➢ ಶೇಖರಣಾ (ಸ್ಟೋರೇಜ್) ಪ್ರಕಾರಗಳನ್ನು ಗುರುತಿಸುವುದು. ಸ್ಟೋರೇಜ್ ವಿಧಾನಗಳನ್ನು ಗುರುತಿಸಲು ಮತ್ತು ಸ್ಟೋರೇಜ್ ಮಾಡಲು ಬಳಸುವ ವಿಭಿನ್ನ ಹಾರ್ಡ್‌ವೇರ್ ಘಟಕಗಳನ್ನು ಗುರುತಿಸುವುದು. ➢ ಕಂಪ್ಯೂಟರ್‌ನಲ್ಲಿ ಬಳಸುವ ಹಾರ್ಡ್‌ವೇರ್ ಘಟಕಗಳ ಪ್ರಕಾರಗಳನ್ನು ಗುರುತಿಸಲು ಮತ್ತು ಅದನ್ನು ಪ್ರತ್ಯೇಕಿಸಲು ತಿಳಿಯುವುದು. ➢ ಸ್ಟೋರೇಜ್ ವಿಧಾನಗಳ,ವಿದ್ಯುತ್ ಸರಬರಾಜಿನ ದೋಷನಿವಾರಣೆಯ ತಂತ್ರಜ್ಞಾನ ತಿಳಿಯುವುದು. ➢ ಪ್ರಿಂಟರ್ ಮತ್ತು ಸ್ಕ್ಯಾನರ್ ಪ್ರಕಾರಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಅದರಲ್ಲಿ ಬಳಸಲಾದ ವೈಶಿಷ್ಟ್ಯಗಳನ್ನು ತಿಳಿಯುವುದು. ➢ ಲ್ಯಾಪ್‌ಟಾಪ್ ಸಾಧನಗಳ ಪ್ರಕಾರಗಳನ್ನು ಗುರುತಿಸಿ ಮತ್ತು 'ನೋಟ್ ಬುಕ್' ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳುವುದು. ➢ ಕಂಪ್ಯೂಟರ್ನ ಭಾಗಗಳನ್ನು ಗುರುತಿಸಲು, ದೋಷನಿವಾರಣೆ ಮತ್ತು ಆಪರೇಟಿಂಗ್ ಸಿಸ್ಟಮ್ ಅನ್ನು ಇನ್ಸ್ಟಾಲ್ ಮಾಡುವುದು ಮತ್ತು ಕಾನ್ಫಿಗರ್ ಮಾಡುವುದು ಮತ್ತು ಅದನ್ನು ಚಾಲನೆ ಮಾಡಲು ಕಲಿಯುವುದು. ➢ ಕೆಲಸದಲ್ಲಿ ಪಾಲಿಸಬೇಕಾದ ಶಿಷ್ಟಾಚಾರದ ರೀತಿ ನೀತಿಗಳ ಮಹತ್ವವನ್ನು ಅರ್ಥಮಾಡಿಕೊಳ್ಳುವುದು. ➢ ಕೆಲಸದಲ್ಲಿ ಪಾಲಿಸಬೇಕಾದ ಸುರಕ್ಷತಾ ಮಾನದಂಡದ ವಿಧಾನಗಳನ್ನು ತಿಳಿಯುವುದು. ➢ ಇದು ಬಹು ಪ್ರಶ್ನೆ(ಮಲ್ಟಿಪಲ್ ಕ್ವೆಶ್ಚನ್) ಪ್ರಕಾರಗಳಾಗಿರುತ್ತದೆ. ➢ ತಾನು ಕಲಿತ ಜ್ಞಾನವನ್ನು ಪ್ರಸ್ತುತಪಡಿಸುವುದು	• ಡೆಸ್ಕ್‌ಟಾಪ್‌ಗಳು • ಲ್ಯಾಪ್‌ಟಾಪ್‌ಗಳು • ನೆಟ್‌ಬುಕ್‌ಗಳು ಮತ್ತು ನೋಟ್‌ಬುಕ್‌ಗಳು • ಲೇಸರ್ ಮುದ್ರಕಗಳು (ಪ್ರಿಂಟರ್ ಗಳು) • ಇಂಕ್ ಜೆಟ್ ಮುದ್ರಕಗಳು (ಪ್ರಿಂಟರ್ ಗಳು) • ಡಾಟ್ ಮ್ಯಾಟ್ರಿಕ್ಸ್ ಮುದ್ರಕಗಳು (ಪ್ರಿಂಟರ್ ಗಳು) • ಈ ಮೇಲಿನವುಗಳಿಗೆಲ್ಲವಕ್ಕೂ ಪವರ್ ಅಡಾಪ್ಟರುಗಳು
2	ನೆಟ್‌ವರ್ಕ್ ನ ಪ್ರಮುಖ ಅಂಶಗಳು ಸಿದ್ಧಾಂತ (ಥಿಯರಿ) ತರಗತಿಯ ಅವಧಿ (hh:mm) 15:00 ಪ್ರಾಯೋಗಿಕ (ಪ್ರಾಕ್ಟಿಕಲ್) ತರಗತಿಯ ಅವಧಿ (hh:mm) 22:00 NOS ಗೆ ಸಂಬಂಧಿಸಿದ ಕೋಡ್ ELE/N4602 ELE/N4603	➢ ನೆಟ್ವರ್ಕಿಂಗ್ ಅನ್ನು ಅರ್ಥಮಾಡಿಕೊಳ್ಳುವುದು, OSI ಪರಿಕಲ್ಪನೆಗಳು ನೆಟ್ವರ್ಕ್ ತಂತ್ರಜ್ಞಾನಗಳನ್ನು ಗುರುತಿಸುವುದು. ➢ ಅಪ್ಲಿಕೇಶನ್ ಕ್ರಿಯಾತ್ಮಕತೆಯ ವಿಧಗಳನ್ನು ಅರ್ಥಮಾಡಿಕೊಳ್ಳುವುದು. ➢ ಈಥರ್ನೆಟ್ ಕೇಬಲ್ ಕ್ರಿಂಪ್ ಮಾಡಲು, ಕಲರ್ ಕೋಡಿಂಗ್ ಅನ್ನು ಅರ್ಥಮಾಡಿಕೊಳ್ಳುವುದು. ನೆಟ್‌ವರ್ಕ್ ಅಡಾಪ್ಟರ್ ಸಂರಚನೆಯನ್ನು (ಕಾನ್ಫಿಗರೇಶನ್) ಅನ್ನು ಗುರುತಿಸುವುದು. ➢ ನೆಟ್‌ವರ್ಕ್ ವಿನ್ಯಾಸಗೊಳಿಸುವ ರಚನೆಯನ್ನು ಗುರುತಿಸುವುದು. ➢ ಡಿವೈಸ್ ನ ವಿಭಿನ್ನ ಸಂರಚನಾ ವಿಧಾನಗಳನ್ನು ಅರ್ಥಮಾಡಿಕೊಳ್ಳುವುದು. ➢ ಸ್ವಯಂ ಪ್ರೇರಣೆ, ಆತ್ಮ ವಿಶ್ವಾಸದ ವಿಧಾನವನ್ನು ಅರ್ಥಮಾಡಿಕೊಳ್ಳುವುದು. ➢ ಇದು ಬಹು ಪ್ರಶ್ನೆ(ಮಲ್ಟಿಪಲ್ ಕ್ವೆಶ್ಚನ್) ಪ್ರಕಾರಗಳಾಗಿರುತ್ತದೆ. ➢ ತಾನು ಕಲಿತ ಜ್ಞಾನವನ್ನು ಪ್ರಸ್ತುತಪಡಿಸುವುದು	• POST (ಪವರ್ ಆನ್ ಸೆಲ್ಫ್ ಟೆಸ್ಟ್) ಕಾರ್ಡ್‌ಗಳು • ಸ್ಕ್ರೂ ಡ್ರೈವರ್ • ಕೇಬಲ್ಸ್ (RJ 45) • ನೆಟ್‌ವರ್ಕ್ ಸ್ವಿಚ್ • ರೂಟರ್ ಗಳು
3	ವಿಂಡೋಸ್ 7/10 ನ ಪ್ರಮುಖ ಅಂಶಗಳು	➢ ವಿಂಡೋಸ್ ಕ್ಲೈಂಟ್, ಕಾರ್ಯಕ್ಷಮತೆ ಮಾಹಿತಿ, ಪರಿಕರ ಸಂರಚನೆಯ ವೈಶಿಷ್ಟ್ಯಗಳನ್ನು ಅರ್ಥಮಾಡಿಕೊಳ್ಳುವುದು.	• ವೀಡಿಯೊಗಳು • ಪವರ್ ಪಾಯಿಂಟ್ • ಲ್ಯಾಪ್‌ಟಾಪ್

	ಸಿದ್ಧಾಂತ (ಥಿಯರಿ) ತರಗತಿಯ ಅವಧಿ (hh:mm) 15:00 ಪ್ರಾಯೋಗಿಕ (ಪ್ರಾಕ್ಟಿಕಲ್) ತರಗತಿಯ ಅವಧಿ (hh:mm) 22:00 **NOS ಗೆ ಸಂಬಂಧಿಸಿದ ಕೋಡ್** ELE/N4602 ELE/N4603	➢ ಇನ್ಸ್ಟಾಲೇಷನ್ ವಿಧಾನಗಳು, ಅಪ್ ಗ್ರೇಡಿಂಗ್ ಮತ್ತು ಅದರ ವೈಶಿಷ್ಟ್ಯಗಳನ್ನು ಅರ್ಥಮಾಡಿಕೊಳ್ಳುವುದು. ➢ ಸಂರಚನೆ (ಕಾನ್ಫಿಗರಿಂಗ್), ಮೈಂಟೈನಿಂಗ್ (ನಿರ್ವಹಣೆ), ಬ್ಯಾಕಪ್ ಮತ್ತು ರಿಕವರಿ ವಿಧಾನವನ್ನು ಅರ್ಥಮಾಡಿಕೊಳ್ಳುವುದು. ➢ ಅನುಸ್ಥಾಪನೆ(ಇನ್ಸ್ಟಾಲೇಷನ್),ಸಂರಚನೆ(ಕಾನ್ಫಿಗರೇಷನ್), ಸಿಸ್ಟಮ್ ಸುರಕ್ಷತೆ, ಬ್ಯಾಕಪ್ ನಿರ್ವಹಣೆ, ಬ್ಯಾಕಪ್ ಮರುಪಡೆಯುವಿಕೆ ವಿಧಾನಗಳನ್ನು ಅಭ್ಯಾಸಿಸುವುದು. ➢ ಮಾಡಬೇಕಾದ ಮೂಲಭೂತ ಕಾರ್ಯಗಳ ವಿಧಾನವನ್ನು ಅರ್ಥಮಾಡಿಕೊಳ್ಳುವುದು, ಒದಗಿಸಬೇಕಾದ ಸೇವೆ, ಔಪಚಾರಿಕ ಸಂದರ್ಭಗಳಲ್ಲಿ ಪರಿಣಾಮಕಾರಿಯಾಗಿ ಸಂವಹನ ನಡೆಸುವುದು. ➢ ಇದು ಬಹು ಪ್ರಶ್ನೆ(ಮಲ್ಟಿಪಲ್ ಕ್ವೆಶ್ಚನ್) ಪ್ರಕಾರಗಳಾಗಿರುತ್ತದೆ. ➢ ತಾನು ಕಲಿತ ಜ್ಞಾನವನ್ನು ಪ್ರಸ್ತುತಪಡಿಸುವುದು	• ಪ್ರೊಜೆಕ್ಟರ್ • ಪ್ರೊಜೆಕ್ಟರ್ ಸ್ಕ್ರೀನ್ • ವೈಟ್ ಬೋರ್ಡ್
4	ವಿಂಡೋಸ್ ಸರ್ವರ್ ಸಿದ್ಧಾಂತ (ಥಿಯರಿ) ತರಗತಿಯ ಅವಧಿ (hh:mm) 15:00 ಪ್ರಾಯೋಗಿಕ (ಪ್ರಾಕ್ಟಿಕಲ್) ತರಗತಿಯ ಅವಧಿ (hh:mm) 22:00 **NOS ಗೆ ಸಂಬಂಧಿಸಿದ ಕೋಡ್** ELE/N4602 ELE/N4603	➢ ಡೈರೆಕ್ಟರಿ ಸೇವೆಗಳು ಮತ್ತು ವಿಭಿನ್ನ ಕ್ರಿಯಾತ್ಮಕ ಹಂತಗಳನ್ನು ಅರ್ಥಮಾಡಿಕೊಳ್ಳುವುದು. ➢ ಡೈರೆಕ್ಟರಿ ಸೇವೆಗಳನ್ನು ಕಾನ್ಫಿಗರ್ ಮಾಡುವ ವಿಧಾನಗಳನ್ನು ಅರ್ಥಮಾಡಿಕೊಳ್ಳುವುದು. ➢ ಡಿಸಾಸ್ಟರ್ ರಿಕವರಿ ಮತ್ತು ಬ್ಯಾಕಪ್ ವಿಧಾನಗಳನ್ನು ಅರ್ಥಮಾಡಿಕೊಳ್ಳುವುದು. ➢ ಸುರಕ್ಷಿತ ಡೊಮೈನ್ ಅನ್ನು ಕಾರ್ಯಗತಗೊಳಿಸುವ, ಬಳಕೆದಾರರ ಆಡಳಿತ ಮತ್ತು ರಚನೆ, ಗುಂಪು ನೀತಿಗಳನ್ನು ನಿರ್ವಹಿಸುವ ವಿಧಾನವನ್ನು ಗುರುತಿಸುವುದು. ➢ ನಿಗದಿಪಡಿಸಿದ ಗುರಿಗಳನ್ನು ಮನದಟ್ಟು ಮಾಡಿಕೊಳ್ಳುವುದು , ಓದುವ ಕೌಶಲ್ಯವನ್ನು ಕಲಿಯುವುದು. ➢ ಇದು ಬಹು ಪ್ರಶ್ನೆ(ಮಲ್ಟಿಪಲ್ ಕ್ವೆಶ್ಚನ್) ಪ್ರಕಾರಗಳಾಗಿರುತ್ತದೆ. ➢ ತಾನು ಕಲಿತ ಜ್ಞಾನವನ್ನು ಪ್ರಸ್ತುತಪಡಿಸುವುದು	• ವೀಡಿಯೊಗಳು • ಪವರ್ ಪಾಯಿಂಟ್ • ಲ್ಯಾಪ್‌ಟಾಪ್ • ಪ್ರೊಜೆಕ್ಟರ್ • ಪ್ರೊಜೆಕ್ಟರ್ ಸ್ಕ್ರೀನ್ • ವೈಟ್ ಬೋರ್ಡ್

5	ಲಿನಕ್ಸ್ ಸರ್ವರ್ ಸಿದ್ದಾಂತ (ಥಿಯರಿ) ತರಗತಿಯ ಅವಧಿ (hh:mm) 15:00 ಪ್ರಾಯೋಗಿಕ (ಪ್ರಾಕ್ಟಿಕಲ್) ತರಗತಿಯ ಅವಧಿ (hh:mm) 22:00 NOS ಗೆ ಸಂಬಂಧಿಸಿದ ಕೋಡ್ ELE/N4602 ELE/N4603	➢ ಲಿನಕ್ಸ್ ನ ವೈಶಿಷ್ಟ್ಯಗಳು, ಮೂಲ ಆಜ್ಞೆ (ಬೇಸಿಕ್ ಕಮಾಂಡ್)ಗಳನ್ನು ಗುರುತಿಸುವುದು. ➢ ಸರ್ವರ್ ಮತ್ತು ಸೇವೆಗಳನ್ನು ಇನ್ಸ್ಟಾಲ್, ಕಾನ್ಫಿಗರ್ ಮಾಡುವ ವಿಧಾನಗಳನ್ನು ಅರ್ಥಮಾಡಿಕೊಳ್ಳುವುದು. ➢ ಸಿಸ್ಟಮ್ ನಲ್ಲಿ ಆದಂತಹ ತೊಂದರೆಯ ವಿಶ್ಲೇಷಣೆ ಹಾಗು ಫೈಲ್‌ಸಿಸ್ಟಮ್ ಕರಪ್ಟ್ ವಿಧಾನವನ್ನು ಅರ್ಥಮಾಡಿಕೊಳ್ಳುವುದು. ➢ ನೆಟ್‌ವರ್ಕ್ ಅಡಾಪ್ಟರ್,ಸ್ಟೋರೇಜ್ ನಿರ್ವಹಣೆ ಹಾಗು ಮೂಲ ಸೇವೆಗಳನ್ನು ಇನ್ಸ್ಟಾಲ್, ಕಾನ್ಫಿಗರ್ ಮಾಡುವ ವಿಧಾನಗಳನ್ನು ಅರ್ಥಮಾಡಿಕೊಳ್ಳುವುದು. ➢ ನಡವಳಿಕೆ, ಮೌಖಿಕ ಸಂವಹನ, ಗ್ರಹಿಕೆಯ ಪ್ರಭಾವವನ್ನು ಅರ್ಥಮಾಡಿಕೊಳ್ಳುವುದು. ➢ ಇದು ಬಹು ಪ್ರಶ್ನೆ(ಮಲ್ಟಿಪಲ್ ಕ್ವೆಶ್ಚನ್) ಪ್ರಕಾರಗಳಾಗಿರುತ್ತದೆ. ➢ ತಾನು ಕಲಿತ ಜ್ಞಾನವನ್ನು ಪ್ರಸ್ತುತಪಡಿಸುವುದು	• ವೀಡಿಯೊಗಳು • ಪವರ್ ಪಾಯಿಂಟ್ • ಲ್ಯಾಪ್‌ಟಾಪ್ • ಪ್ರೊಜೆಕ್ಟರ್ • ಪ್ರೊಜೆಕ್ಟರ್ ಸ್ಕ್ರೀನ್ • ವೈಟ್ ಬೋರ್ಡ್
6	ಐಟಿ ಭದ್ರತೆ (IT ಸೆಕ್ಯೂರಿಟಿ) ಮುಖ್ಯಾಂಶಗಳು ಸಿದ್ದಾಂತ (ಥಿಯರಿ) ತರಗತಿಯ ಅವಧಿ (hh:mm) 15:00 ಪ್ರಾಯೋಗಿಕ (ಪ್ರಾಕ್ಟಿಕಲ್) ತರಗತಿಯ ಅವಧಿ (hh:mm) 22:00 NOS ಗೆ ಸಂಬಂಧಿಸಿದ ಕೋಡ್ ELE/N4602 ELE/N4603	➢ ಆಂಟಿ-ವೈರಸ್ ಅನ್ನು ಇನ್ಸ್ಟಾಲ್, ಕಾನ್ಫಿಗರ್ ಮಾಡುವ ದೃಷ್ಟಿಕೋನ ಮತ್ತು ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳುವುದು. ➢ ವೈರಸ್, ವರ್ಮ್, ಟ್ರೋಜನ್ ಇತ್ಯಾದಿಗಳ ಪ್ರಕಾರಗಳು ಹಾಗು ಸೂಚನೆಯನ್ನು ಗುರುತಿಸುವ ವಿಧಾನಗಳು. ➢ ಹೊಂದಿಕೆಯಾಗುವಲ್ಲಿನ (ಕಾಂಪ್ಯಾಟಿಬಿಲಿಟಿ) ಸಮಸ್ಯೆಗಳು ಮತ್ತು ಸಾಮಾನ್ಯ ದೋಷಗಳನ್ನು ಅರ್ಥಮಾಡಿಕೊಳ್ಳುವುದು. ಮೂಲಭೂತ ಭದ್ರತಾ ಅಪಾಯಗಳನ್ನು (ಬೇಸಿಕ್ ಸೆಕ್ಯೂರಿಟಿ ರಿಸ್ಕ್) ಗುರುತಿಸುವುದು. ➢ ಸಿಸ್ಟಮ್ ದುರ್ಬಲತೆಯ ವಿಧಾನಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಅವುಗಳನ್ನು ಸರಿಪಡಿಸುವುದು ಮತ್ತು ತಡೆಗಟ್ಟುವ ಕ್ರಮದ ವಿಧಾನಗಳು ➢ ಸಕಾರಾತ್ಮಕ ಮನೋಭಾವ, ಅರಿವು, ಆದ್ಯತೆ ಆಧಾರದ ಮೇಲೆ ಕೆಲಸ ನಿರ್ಧರಿಸುವ ವಿಧಾನಗಳನ್ನು ಅರ್ಥಮಾಡಿಕೊಳ್ಳುವುದು. ➢ ಇದು ಬಹು ಪ್ರಶ್ನೆ(ಮಲ್ಟಿಪಲ್ ಕ್ವೆಶ್ಚನ್) ಪ್ರಕಾರಗಳಾಗಿರುತ್ತದೆ. ➢ ತಾನು ಕಲಿತ ಜ್ಞಾನವನ್ನು ಪ್ರಸ್ತುತಪಡಿಸುವುದು	• ವೀಡಿಯೊಗಳು • ಪವರ್ ಪಾಯಿಂಟ್ • ಲ್ಯಾಪ್‌ಟಾಪ್ • ಪ್ರೊಜೆಕ್ಟರ್ • ಪ್ರೊಜೆಕ್ಟರ್ ಸ್ಕ್ರೀನ್ • ವೈಟ್ ಬೋರ್ಡ್

7	**ITIL v3 ನ ಪರಿಕಲ್ಪನೆಗಳು** **ಸಿದ್ಧಾಂತ (ಥಿಯರಿ) ತರಗತಿಯ ಅವಧಿ** (hh:mm) 15:00 **ಪ್ರಾಯೋಗಿಕ (ಪ್ರಾಕ್ಟಿಕಲ್) ತರಗತಿಯ ಅವಧಿ** (hh:mm) 22:00 **NOS ಗೆ ಸಂಬಂಧಿಸಿದ ಕೋಡ್** ELE/N4602 ELE/N4603	➢ ಮೇಲ್ವಿಚಾರಣೆ (ಮಾನಿಟರ್), ಅಳೆಯುವುದು (ಮೆಷರ್) ಮತ್ತು ವರದಿ (ರಿಪೋರ್ಟಿಂಗ್) ಮಾಡುವ ವಿಧಾನವನ್ನು ಅರ್ಥಮಾಡಿಕೊಳ್ಳುವುದು. ➢ CSF, KPI ಗಳು ಮತ್ತು ಚಟುವಟಿಕೆಯ ವಿಧಾನವನ್ನು ಅರ್ಥಮಾಡಿಕೊಳ್ಳುವುದು. ➢ SLA, ಸಮಯಪ್ರಜ್ಞೆ, ಪ್ರತಿಕ್ರಿಯೆ ಮತ್ತು ರೆಸಲ್ಯೂಶನ್ ಡೇಟಾದ ವಿಧಾನಗಳನ್ನು ಅರ್ಥಮಾಡಿಕೊಳ್ಳುವುದು. ➢ ಸಮಸ್ಯೆ ನಿರ್ವಹಣಾ ಪ್ರಕ್ರಿಯೆಯ ಕ್ರಮ (ಪ್ರಾಬ್ಲಮ್ ಮ್ಯಾನೇಜಮೆಂಟ್ ಪ್ರೋಸೆಸ್ ಫ್ಲೋ), ನಿರ್ಣಯ ಪರಿಹಾರವನ್ನು (ಡೇಟರ್ಮಿನೇಷನ್ ರೆಸೊಲ್ಯೂಷನ್) ಅರ್ಥಮಾಡಿಕೊಳ್ಳುವುದು. ➢ ಸಮಸ್ಯೆ ನಿರ್ವಹಣೆ, ಟ್ರ್ಯಾಕಿಂಗ್ ವರದಿ ಮತ್ತು ನಿಯಂತ್ರಣ ಕ್ರಮಗಳ ವಿಧಾನಗಳನ್ನು ಅರ್ಥಮಾಡಿಕೊಳ್ಳುವುದು. ➢ ನಿಮ್ಮ ಕೆಲಸದಲ್ಲಿ ಹೊಸ ವಿಷಯಗಳನ್ನು ಕಲಿಯುವ ವಿಧಾನಗಳನ್ನು ಅರ್ಥಮಾಡಿಕೊಳ್ಳುವುದು. ➢ ಇದು ಬಹು ಪ್ರಶ್ನೆ(ಮಲ್ಟಿಪಲ್ ಕ್ವೆಶ್ಚನ್) ಪ್ರಕಾರಗಳಾಗಿರುತ್ತದೆ. ➢ ತಾನು ಕಲಿತ ಜ್ಞಾನವನ್ನು ಪ್ರಸ್ತುತಪಡಿಸುವುದು	• ವೀಡಿಯೊಗಳು • ಪವರ್ ಪಾಯಿಂಟ್ • ಲ್ಯಾಪ್‌ಟಾಪ್ • ಪ್ರೊಜೆಕ್ಟರ್ • ಪ್ರೊಜೆಕ್ಟರ್ ಸ್ಕ್ರೀನ್ • ವೈಟ್ ಬೋರ್ಡ್
8	**ಅಂತಿಮ ಮೌಲ್ಯಮಾಪನ** **ಸಿದ್ಧಾಂತ (ಥಿಯರಿ) ತರಗತಿಯ ಅವಧಿ** (hh:mm) 15:00 **ಪ್ರಾಯೋಗಿಕ (ಪ್ರಾಕ್ಟಿಕಲ್) ತರಗತಿಯ ಅವಧಿ** (hh:mm) 22:00 **NOS ಗೆ ಸಂಬಂಧಿಸಿದ ಕೋಡ್** ELE/N4601 ELE/N4602 ELE/N4603 ELE/N9909	➢ ಎರಡು ಬಗೆಯ ಮೌಲ್ಯಮಾಪನ ಇರುತ್ತದೆ • ಬಹು ಆಯ್ಕೆ (ಮಲ್ಟಿಪಲ್ ಚಾಯ್ಸ್) • ಸನ್ನಿವೇಶ ಆಧಾರಿತ	.

	ಒಟ್ಟು ಅವಧಿ ಸಿದ್ಧಾಂತ (ಥಿಯರಿ) ತರಗತಿಯ ಅವಧಿ 120:00 ಪ್ರಾಯೋಗಿಕ (ಪ್ರಾಕ್ಟಿಕಲ್) ತರಗತಿಯ ಅವಧಿ 180:00	**ಅಗತ್ಯವಿರುವ ವಿಶಿಷ್ಟ ಸಲಕರಣೆಗಳು:** → ಕೇಬಲ್ → ಕ್ರಿಂಪಿಂಗ್ ಟೂಲ್ → ಡೆಸ್ಕ್ ಟಾಪ್ → ಡಿಜಿಟಲ್ ಮಲ್ಟಿಮೀಟರ್ → ಡಾಟ್ ಮ್ಯಾಟ್ರಿಕ್ಸ್ ಮುದ್ರಕ (ಪ್ರಿಂಟರ್) → ESD ಕೈಗವಸುಗಳು → ಇಂಕ್ ಜೆಟ್ ಮುದ್ರಕ (ಪ್ರಿಂಟರ್) → ಇನ್ಸುಲೇಷನ್ ಟೇಪ್ → ಲಾನ್ ಟೆಸ್ಟರ್ → ಲ್ಯಾಪ್‌ಟಾಪ್ → ಲೆಡ್ ಸೋಲ್ಡರ್ → ಮದರ್ ಬೋರ್ಡ್ ಡಯಾಗ್ನೋಸರ್ → ಮಲ್ಟಿ ಫನ್ ಕ್ಷನ್ ಲೇಸರ್ ಮುದ್ರಕ (ಪ್ರಿಂಟರ್) → ನೆಟ್‌ವರ್ಕ್ ಸ್ವಿಚ್ → POST (POST–ಪವರ್ ಆನ್ ಸೆಲ್ಫ್ ಟೆಸ್ಟ್) ಕಾರ್ಡ್‌ಗಳು → ರೂಟರ್ → ಚಿತ್ರಶೋಧಕ (ಸ್ಕ್ಯಾನರ್) → ಸ್ಕ್ರೂ ಡ್ರೈವರ್ ಸೆಟ್ → ಸಾಲ್ಡರಿಂಗ್ ಫ್ಲಕ್ಸ್ → ಸಾಲ್ಡರಿಂಗ್ ಐರನ್

ಒಟ್ಟು ಕೋರ್ಸ್ ಅವಧಿ: 300 ಗಂಟೆಗಳು 00 ನಿಮಿಷಗಳು

(ಈ ಪಠ್ಯಕ್ರಮವನ್ನು ESSCI–ಎಲೆಕ್ಟ್ರಾನಿಕ್ಸ್ ಸೆಕ್ಟರ್ ಸ್ಕಿಲ್ಸ್ ಕೌನ್ಸಿಲ್ ಆಫ್ ಇಂಡಿಯಾ (Electronics Sector Skills Council of India) ಅನುಮೋದಿಸಿದೆ)

ಅನುಬಂಧ **A** : ತರಬೇತುದಾರರ ಪೂರ್ವಾಗತ್ಯಗಳು (ಕನಿಷ್ಠ ಅವಶ್ಯಕತೆಗಳು)

ತರಬೇತುದಾರರಿಗೆ ಈ ಉದ್ಯೋಗದ ಪಾತ್ರಕ್ಕಾಗಿ ಇರಬೇಕಾದ ಕನಿಷ್ಠ ಅವಶ್ಯಕತೆಗಳು: "ಫೀಲ್ಡ್ ಟೆಕ್ನೀಶಿಯನ್ – ಕಂಪ್ಯೂಟಿಂಗ್ ಮತ್ತು ಪೆರಿಫೆರಲ್ಸ್" ಅನ್ನು ಕ್ವಾಲಿಫಿಕೇಷನ್ ಪ್ಯಾಕ್‌ಗೆ ಮ್ಯಾಪ್ ಮಾಡಲಾಗಿದೆ: "**ELE / Q4601** ಆವೃತ್ತಿ **1.0**"

ಕ್ರಮ ಸಂಖ್ಯೆ	ವಿಭಾಗ	ವಿವರಗಳು
1	ಕೆಲಸದ ವಿವರ	ಮಾನ್ಯತೆ ಪಡೆದ ಕ್ವಾಲಿಫಿಕೇಷನ್ ಪ್ಯಾಕ್ "ELE / Q4601 ಆವೃತ್ತಿ 1.0" ಗೆ ಅನುಗುಣವಾಗಿ ಮೇಲೆ ವಿವರಿಸಿದ ಪಠ್ಯಕ್ರಮದ ಪ್ರಕಾರ ತರಬೇತಿ ಸೇವೆಯನ್ನು ನೀಡುವುದು.
2	ವೈಯಕ್ತಿಕ ಗುಣಲಕ್ಷಣಗಳು	ತರಬೇತಿಯನ್ನು ನಡೆಸಲು ಯೋಗ್ಯ ಮತ್ತು ತರಬೇತಿಯ ಕೊನೆಯಲ್ಲಿ ಸಮರ್ಥ ಹಾಗೂ ಉದ್ಯೋಗಕ್ಕೆ ತಕ್ಕನಾದ ಅಭ್ಯರ್ಥಿಗಳನ್ನು ತರ್ಕಬದ್ಧವಾಗಿ ಆಯ್ಕೆ ಮಾಡಲು ಸಮರ್ಥರಿರಬೇಕು. ಉತ್ತಮ ಸಂವಹನ ಕೌಶಲ್ಯಗಳು, ಪರಸ್ಪರ ಕೌಶಲ್ಯಗಳು, ಒಂದು ತಂಡದ ಭಾಗವಾಗಿ ಕೆಲಸ ಮಾಡುವ ಸಾಮರ್ಥ್ಯ; ಉತ್ಸಾಹ ಮತ್ತು ಪ್ರಸ್ತಾಪಿತ ಕ್ಷೇತ್ರದ ಗುಣಮಟ್ಟದಲ್ಲಿ ಇತರರನ್ನು ಅಭಿವೃದ್ಧಿಪಡಿಸುವ ಹಾಗೂ ಹೊಸದನ್ನು ಕಂಡಾಗ ಅದರಿಂದ ಸ್ವತಃ ನವೀಕರಿಸಿಕೊಳ್ಳುವ; ಸುಸಂಘಟಿತ ಮತ್ತು ಕೇಂದ್ರೀಕೃತ, ಕಲಿಯಲು ಉತ್ಸುಕನಾಗಿರಬೇಕು.
3	ಕನಿಷ್ಠ ಶೈಕ್ಷಣಿಕ ಅರ್ಹತೆಗಳು	12 ನೇ ತರಗತಿ ಪಾಸ್ ಆಗಿರಬೇಕು ಹಾಗೂ 2 ವರ್ಷಗಳ ಉದ್ಯಮದ ಅನುಭವ ಪಡೆದಿರಬೇಕು.
4a	ಡೊಮೈನ್ ಸರ್ಟಿಫಿಕೇಷನ್	"ಫೀಲ್ಡ್ ಟೆಕ್ನೀಶಿಯನ್ – ಕಂಪ್ಯೂಟಿಂಗ್ ಮತ್ತು ಪೆರಿಫೆರಲ್ಸ್" QP "ELE 4601" ಪ್ರಕಾರ ಉದ್ಯೋಗಕ್ಕೆ ಆಯ್ಕೆ ಹೊಂದಲು ಕನಿಷ್ಠ ಸಂಪಾದಿಸಬೇಕಾದ ಅಂಕ – 70%
4b	ಪ್ಲಾಟ್‌ಫಾರ್ಮ್ ಸರ್ಟಿಫಿಕೇಷನ್	"ತರಬೇತುದಾರ", ಕ್ವಾಲಿಫಿಕೇಷನ್ ಪ್ಯಾಕ್ "SSC / 1402" ಪ್ರಕಾರ ಉದ್ಯೋಗಕ್ಕೆ ತರಬೇತುದಾರ ಆಯ್ಕೆ ಆಗಲು ಸಂಪಾದಿಸಬೇಕಾದ ಕನಿಷ್ಠ ಅಂಕಗಳು = 70%
5	ಅನುಭವ	2 ವರ್ಷಗಳ ಸಂಬಂಧಿತ ಕೈಗಾರಿಕಾ ಅನುಭವ ಮತ್ತು ತರಬೇತಿ ನೀಡಿದ ಅನುಭವ ಹೊಂದಿರಬೇಕು.

ಅನುಬಂಧ B : ಮೌಲ್ಯಮಾಪನದ ಮಾನದಂಡಗಳು

ಫೀಲ್ಡ್ ಟೆಕ್ನೀಶಿಯನ್ – ಕಂಪ್ಯೂಟಿಂಗ್ ಮತ್ತು ಪೆರಿಫೆರಲ್ ಸ್ಥಾನಕ್ಕೆ ಮೌಲ್ಯಮಾಪನದ ಮಾನದಂಡ	
ಕೆಲಸದ ಪಾತ್ರ (ಜಾಬ್ ರೋಲ್)	ಕ್ಷೇತ್ರ ತಂತ್ರಜ್ಞ (ಫೀಲ್ಡ್ ಟೆಕ್ನೀಶಿಯನ್) – ಕಂಪ್ಯೂಟಿಂಗ್ ಮತ್ತು ಪೆರಿಫೆರಲ್
ಕ್ವಾಲಿಫಿಕೇಷನ್ ಪ್ಯಾಕ್	ELE/ Q4601 ಆವೃತ್ತಿ 1.0
ವಲಯ ಕೌಶಲ್ಯ ಮಂಡಳಿ	ವಿದ್ಯುನ್ಮಾನ ಶಾಸ್ತ್ರ (ಎಲೆಕ್ಟ್ರಾನಿಕ್ಸ್)

ಕ್ರಮ ಸಂಖ್ಯೆ	ಮೌಲ್ಯಮಾಪನಕ್ಕಾಗಿ ಮಾರ್ಗಸೂಚಿಗಳು
1	ಪ್ರತಿ ಕ್ವಾಲಿಫಿಕೇಷನ್ ಪ್ಯಾಕ್‌ಗೆ ಮೌಲ್ಯಮಾಪನ ಮಾಡುವ ಮಾನದಂಡಗಳನ್ನು ವಲಯ ಕೌಶಲ್ಯ ಮಂಡಳಿಯು (SSC–ಸೆಕ್ಟರ್ ಸ್ಕಿಲ್ ಕೌನ್ಸಿಲ್) ರಚಿಸುತ್ತದೆ. ಪ್ರತಿ ಕಾರ್ಯಕ್ಷಮತೆಯ ಮಾನದಂಡಗಳಿಗೆ (PC – ಪರ್ಫಾರ್ಮೆನ್ಸ್ ಕ್ರೈಟೀರಿಯ) NOS ನಲ್ಲಿ ಅದರ ಪ್ರಾಮುಖ್ಯತೆಗೆ ಅನುಗುಣವಾಗಿ ಅಂಕಗಳನ್ನು ನಿಗದಿಪಡಿಸಲಾಗುತ್ತದೆ. ಪ್ರತಿ ಪರ್ಫಾರ್ಮೆನ್ಸ್ ಕ್ರೈಟೀರಿಯಗಳಿಗೆ SSC ಸಿದ್ಧಾಂತ (ಥಿಯರಿ) ಮತ್ತು ಪ್ರಾಯೋಗಿಕ ಕೌಶಲ್ಯದ (ಸ್ಕಿಲ್ಸ್ ಪ್ರಾಕ್ಟಿಕಲ್) ಅಂಕಗಳ ಪ್ರಮಾಣವನ್ನು ಸಹ ನಿಗದಿ ಪಡಿಸುತ್ತದೆ.
2	SSC ಮೂಲಕ ರಚಿಸಲ್ಪಟ್ಟ ಪ್ರಶ್ನೆಗಳ ಜ್ಞಾನ ಬ್ಯಾಂಕ್ ಆಧಾರದ ಮೇಲೆ ಸಿದ್ಧಾಂತ (ಥಿಯರಿ) ಭಾಗದ ಮೌಲ್ಯಮಾಪನವು ನಡೆಯುತ್ತದೆ.
3	ಸಿದ್ಧಾಂತ (ಥಿಯರಿ) ಭಾಗಕ್ಕೆ ವಿಶಿಷ್ಟವಾದ ಪ್ರಶ್ನೆ ಪತ್ರಿಕೆಗಳನ್ನು ವೈಯಕ್ತಿಕ ಮೌಲ್ಯಮಾಪನ ಏಜೆನ್ಸಿಗಳು ಪ್ರತಿ ಪರೀಕ್ಷೆ / ತರಬೇತಿ ಕೇಂದ್ರದಲ್ಲಿ ಪ್ರತಿ ಅಭ್ಯರ್ಥಿಗೆ ಹೊಂದುವಂತೆ ರಚಿಸುತ್ತವೆ. (ಈ ಕೆಳಗಿನ ಮೌಲ್ಯಮಾಪನ ಮಾನದಂಡಗಳ ಪ್ರಕಾರ)
4	ಈ ಮಾನದಂಡಗಳ ಆಧಾರದ ಮೇಲೆ ಪ್ರತಿ ಪರೀಕ್ಷಾ / ತರಬೇತಿ ಕೇಂದ್ರದಲ್ಲಿ ಪ್ರಾಯೋಗಿಕ ಕೌಶಲ್ಯವನ್ನು (ಸ್ಕಿಲ್ಸ್ ಪ್ರಾಕ್ಟಿಕಲ್) ಪರೀಕ್ಷಿಸಲು ವೈಯಕ್ತಿಕ ಮೌಲ್ಯಮಾಪನ ಏಜೆನ್ಸಿಗಳು ಪ್ರತಿ ವಿದ್ಯಾರ್ಥಿಗೆ ವಿಶಿಷ್ಟವಾದ ಮೌಲ್ಯಮಾಪನಗಳನ್ನು ರಚಿಸುತ್ತವೆ.
5	ಕ್ವಾಲಿಫಿಕೇಷನ್ ಪ್ಯಾಕ್ ಅನ್ನು ಯಶಸ್ವಿಯಾಗಿ ಉತ್ತೀರ್ಣನಾಗಲು ಅಭ್ಯರ್ಥಿಯು ಪ್ರತಿ NOS ನಲ್ಲಿ ಕನಿಷ್ಠ 70% ಅಂಕ ಗಳಿಸಬೇಕು.
6	ಕೆಲವೇ ಸಂಖ್ಯೆಯ NOS ಗಳಲ್ಲಿ ಮಾತ್ರ ಯಶಸ್ವಿಯಾಗಿ ಉತ್ತೀರ್ಣನಾಗಿದ್ದರೆ, ಕ್ವಾಲಿಫಿಕೇಷನ್ ಪ್ಯಾಕ್ ಅನ್ನು ಪಾಸ್ ಆಗಲು NOS ನ ಉಳಿದ ಮೌಲ್ಯಮಾಪನವನ್ನು ತೆಗೆದುಕೊಳ್ಳಲು ಅಭ್ಯರ್ಥಿಗಳು ಅರ್ಹರಾಗಿರುತ್ತಾರೆ.

				ಅಂಕಗಳ ಹಂಚಿಕೆ	
ಭಾಗ	ಕಾರ್ಯಕ್ಷಮತೆಯ ಮಾನದಂಡಗಳಿಗೆ (PC – ಪರ್ಫಾರ್ಮೆನ್ಸ್ ಕ್ರೈಟೀರಿಯ)	ಒಟ್ಟು ಅಂಕಗಳು (400)	ಒಟ್ಟು	ಥಿಯರಿ	ಪ್ರಾಯೋಗಿಕ ಕೌಶಲ್ಯ
1. ELE / N4601 ಗ್ರಾಹಕರೊಡನೆ ತೊಡಗಿಸಿ ಕೊಳ್ಳುವುದು (ಎಂಗೇಜ್ಮೆಂಟ್ ವಿಥ್ ಕಸ್ಟಮರ್)	PC 1. ಗ್ರಾಹಕ ಕಾಳಜಿ ಕೇಂದ್ರಕ್ಕೆ (ಕಸ್ಟಮರ್ ಕೇರ್) ಬಂದಿರುವ ಕರೆಗಳ ಆಧಾರದ ಮೇಲೆ ಗ್ರಾಹಕರಿಗೆ ಕಾಲ್ ಮಾಡಿ	**100**	3	1	2
	PC 2. ಕರೆ ಮಾಡಿದಾಗ ಗ್ರಾಹಕರನ್ನು ಸ್ವಾಗತಿಸಿ ಮತ್ತು ಅವರ ಸಮಸ್ಯೆಯನ್ನು ಗಮನದಿಂದ ಆಲಿಸಿ		3	1	2
	PC 3. ಭೇಟಿ ಆಗುವ ಸಮಯ, ಕಾರ್ಯ ಕ್ಷೇತ್ರ ಮತ್ತು ಸ್ಥಳವನ್ನು ಗ್ರಾಹಕರೊಂದಿಗೆ ಮಾತನಾಡುವಾಗ ಖಚಿತಪಡಿಸಿಕೊಳ್ಳಿ.		4	2	2
	PC 4. ಕಂಪನಿಯ ನೀತಿಯ ಪ್ರಕಾರ ಗ್ರಾಹಕರೊಂದಿಗೆ ಸಂವಹನ ನಡೆಸುವಾಗ ನಯವಾಗಿ ಮತ್ತು ತಾಳ್ಮೆಯಿಂದ ಶಿಷ್ಟಾಚಾರವನ್ನು ಅನುಸರಿಸಿ.		6	2	4
	PC 5. ಕೆಲಸ ಮುಗಿದ ನಂತರ ಗ್ರಾಹಕರಿಂದ ಪ್ರತಿಕ್ರಿಯೆ ಪಡೆಯಿರಿ		4	2	2
	PC 6. ಇನ್ಸ್ಟಾಲ್ ಮಾಡುವ ಮತ್ತು ನಂತರದ ಸಮಯದಲ್ಲಿ ಸಿಸ್ಟಮ್ ಅನ್ನು ಇರಿಸಲು ಬೇಕಾದ ಸ್ಥಳದ ಅವಶ್ಯಕತೆಯನ್ನು ಅರ್ಥಮಾಡಿಕೊಳ್ಳಿ		2	1	1
	PC 7. ಗ್ರಾಹಕರು ಎದುರಿಸುತ್ತಿರುವ ಸಮಸ್ಯೆಯ ಲಕ್ಷಣಗಳನ್ನು ಅರ್ಥಮಾಡಿಕೊಳ್ಳಲು ಅವರಿಂದ ಮಾಹಿತಿ ಕೇಳಿ.		4	2	2
	PC 8. ನಿರ್ದಿಷ್ಟ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲು ಗ್ರಾಹಕರಿಗೆ ಓಪನ್ ಎಂಡೆಡ್ ಮತ್ತು ಕ್ಲೋಸ್ಡ್ ಎಂಡೆಡ್ ಪ್ರಶ್ನೆಗಳನ್ನು ಕೇಳಿ		4	2	2
	PC 9. ಬದಲಿ ಅಥವಾ ದುರಸ್ತಿ ಪ್ರಕ್ರಿಯೆಯ ಬಗ್ಗೆ ಗ್ರಾಹಕರಿಗೆ ತಿಳಿಸಿ		4	2	2
	PC 10. ವಾರಂಟಿ ಕವರೇಜ್ ಬಗ್ಗೆ ವಿಚಾರಿಸಿ		3	1	2
	PC 11. ಇತರ ಉಪಯುಕ್ತ ಉತ್ಪನ್ನಗಳು ಮತ್ತು ವಾರ್ಷಿಕ ನಿರ್ವಹಣೆ ಒಪ್ಪಂದದ (ಅನ್ಯುಯೆಲ್ ಮೈಂಟೆನನ್ಸ್ ಕಾಂಟ್ರಾಕ್ಟ್) ಬಗ್ಗೆ ತಿಳಿಸಿ		3	1	2
	PC 12. ಗ್ರಾಹಕರಿಗೆ ಸಮಸ್ಯೆಯನ್ನು ಸಂಕ್ಷಿಪ್ತವಾಗಿ ವಿವರಿಸಿ ಮತ್ತು ಸಂಭವನೀಯ ಪರಿಹಾರಗಳನ್ನು ಸೂಚಿಸಿ		5	2	3
	PC 13. ಸರಿಯಾದ ವಿವರಗಳೊಂದಿಗೆ ಮಾಡ್ಯೂಲ್ ಅನ್ನು ಬದಲಿಸಬೇಕೇ ಅಥವಾ ರಿಪೇರಿ ಮಾಡಬೇಕೇ ಎಂದು ಗ್ರಾಹಕರಿಗೆ ತಿಳಿಸಿ		5	2	3
	PC 14. ದುರಸ್ತಿಗೆ ಬೇಕಾಗುವ ಸಮಯ, ದುರಸ್ತಿ ಪ್ರಕ್ರಿಯೆ ಮತ್ತು ಸೇವೆಗೆ ತಗಲುವ ವೆಚ್ಚ ಅಥವಾ ವಾರಂಟಿ ಒಳಗೆಯೇ ಸೇರುತ್ತದೆಯೇ ಎಂಬುದರ ಬಗ್ಗೆ ಗ್ರಾಹಕರಿಗೆ ವಿವರಿಸಿ		5	2	3
	PC 15. ಹೆಚ್ಚಿನ ಸೇವೆಗಾಗಿ ಗ್ರಾಹಕರ ಅನುಮೋದನೆ ಪಡೆಯಿರಿ		5	2	3
	PC 16. ಗ್ರಾಹಕರಿಗೆ ಸಿಸ್ಟಮ್ ನ ಸಮಸ್ಯೆ (ಗಳು), ತೆಗೆದುಕೊಂಡ ಕ್ರಮಗಳು ಮತ್ತು ಅದಕ್ಕೆ ಸಂಬಂಧಿಸಿದ ವೆಚ್ಚದ ಬಗ್ಗೆ ಚೀಟಿ ಒದಗಿಸಿ ಮತ್ತು ಅದರ ನಕಲನ್ನು ನಿಮ್ಮ ಬಳಿ ಉಳಿಸಿಕೊಳ್ಳಿ		5	2	3
	PC 17. ಗ್ರಾಹಕರಿಗೆ ಅವರು ಖರೀದಿಸಿದ ಮಾಡ್ಯೂಲ್ ಅಥವಾ ಬಿಡಿಭಾಗಗಳ ಸೂಕ್ತವಾದ ಇನ್ವಾಯ್ಸ್ ಒದಗಿಸಿ.		5	2	3
	PC 18. ನಿಗದಿತ ಸೇವಾ ಮಟ್ಟದ ಒಪ್ಪಂದ (SLA – ಸರ್ವಿಸ್ ಲೆವೆಲ್ ಅಗ್ರಿಮೆಂಟ್) ಸಮಯದೊಳಗೆ ಗ್ರಾಹಕರೊಂದಿಗೆ ಸಂವಹನ ನಡೆಸಿ		3	1	2
	PC 19. ಗ್ರಾಹಕರ ಅಗತ್ಯತೆಗಳನ್ನು ಗಮನಿಸಿ ಅದಕ್ಕೆ ತಕ್ಕನಾದ ಸಂಪನ್ಮೂಲಗಳನ್ನು ಗುರುತಿಸಿ ಮತ್ತು ರೆಕಾರ್ಡ್ ಮಾಡಿ		3	1	2

	PC 20. ಸಮಸ್ಯೆಯನ್ನು ನಿಖರವಾಗಿ ನಿರ್ಣಯಿಸಿ ಮತ್ತು ಸೂಕ್ತ ಪರಿಹಾರಗಳನ್ನು ಸೂಚಿಸಿ		3	1	2
	PC 21. ಗ್ರಾಹಕರ ಅವಶ್ಯಕತೆಗಳಿಗೆ ಅನುಗುಣವಾಗಿ ಸರಿಯಾದ ಸೇವೆಯನ್ನು ನೀಡಿ		3	1	2
	PC 22. ಗ್ರಾಹಕರ ವಿಶ್ವಾಸವನ್ನು ಕಾಪಾಡಿಕೊಳ್ಳಲು ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಸಂವಹನ ಮಾಡಿ		4	2	2
	PC 23. ಡಿವೈಸ್ ಇನ್ಸ್ಟಾಲೇಷನ್ ಮಾಡಿ ಸರಿಯಾದ ಜಾಗದಲ್ಲಿ ಇರಿಸಿದ ನಂತರ ಗ್ರಾಹಕರ ಎಷ್ಟು ತೃಪ್ತಿ ಹೊಂದಿದ್ದಾರೆ ಎಂದು ಅಳೆಯಿರಿ		4	2	2
	PC 24. ಗ್ರಾಹಕರು ಅದೇ ಸಮಸ್ಯೆಗಳಿಗೆ ಪುನಃ ಕರೆಯದಂತೆ ಕಾರ್ಯ ನಿರ್ವಹಿಸಿ.		4	1	3
	PC 25. ಗ್ರಾಹಕರನ್ನು ಭೇಟಿ ಮಾಡಿದಾಗ ಅವರ ದೂರುಗಳನ್ನು ಶ್ರದ್ಧೆಯಿಂದ ಆಲಿಸುವುದು ಹಾಗು ಶಿಸ್ತಿನ ವಸ್ತ್ರ ಧರಿಸುವುದರ ಮೂಲಕ ಅವರ ಮೆಚ್ಚುಗೆಯನ್ನು ಸಾಧಿಸಿ		3	1	2
	PC 26. 100% ಗ್ರಾಹಕರ ತೃಪ್ತಿ ಮತ್ತು ಸಕಾರಾತ್ಮಕ ಪ್ರತಿಕ್ರಿಯೆಯನ್ನು ಗಳಿಸಿ.		3	1	2
		ಒಟ್ಟು	**100**	**40**	**60**
2. ELE / N4602 ಹಾರ್ಡ್‌ವೇರ್ ಅನ್ನು ಇನ್ಸ್ಟಾಲ್ ಮಾಡಿ, ಕಾನ್ಫಿಗರ್ ಮಾಡಿ ಮತ್ತು ಹೊಂದಿಸುವುದು	PC 1. ಸೈಟ್ ಪರಿಸ್ಥಿತಿಗಳನ್ನು ಪರಿಶೀಲಿಸಿ	**100**	1	0	1
	PC 2. ಗ್ರಾಹಕರಿಗೆ ಏನಾದರು ಅವರಿಗೆ ಅಗತ್ಯವಿರುವ ಹಾಗೆ ವಿಶೇಷವಾದ ಸೇವೆಯ ಅಗತ್ಯವಿದೆಯೇ ಎಂದು ಪರಿಶೀಲಿಸಿ.		1	0	1
	PC 3. ಹೊಸ ಉತ್ಪನ್ನದ ಪ್ಯಾಕೇಜಿಂಗ್ ಅನ್ನು ಜೋಪಾನದಿಂದ ತೆರೆಯಿರಿ ಮತ್ತು ಹಾರ್ಡ್‌ವೇರ್ ಅನ್ನು ಎಚ್ಚರಿಕೆಯಿಂದ ಹೊರತೆಗೆಯಿರಿ.		1	0	1
	PC 4.CPU, ಮಾನಿಟರ್, ಕೀಬೋರ್ಡ್, ಮೌಸ್ ನಂತಹ ಎಲ್ಲಾ ಹಾರ್ಡ್‌ವೇರ್ ಸಾಧನಗಳನ್ನು ಸಿಸ್ಟಂನೊಂದಿಗೆ ಕ್ರಮ ಬದ್ಧವಾಗಿ ಸಂಪರ್ಕಿಸಿ.		2	1	1
	PC 5. ಲ್ಯಾಪ್‌ಟಾಪ್‌ಗಳಿಗೆ ಅದರ ಬ್ಯಾಟರಿಯನ್ನು ಹಾಕಿ, ಪ್ಲಗ್ ಇನ್ ಮಾಡಿ ಮತ್ತು ಸಿಸ್ಟಮ್ ಅನ್ನು ಸ್ವಿಚ್ ಆನ್ ಮಾಡಿ.		2	1	1
	PC 6. PCBಯನ್ನು ESD ಮಾನದಂಡಗಳೊಂದಿಗೆ ಕೆಲಸ ನಿರ್ವಹಿಸುವಾಗ ಹಾರ್ಡ್‌ವೇರ್ ಮಾಡ್ಯೂಲ್‌ಗಳನ್ನು ನಿರ್ವಹಿಸುವಾಗ ಸ್ಟ್ಯಾಂಡರ್ಡ್ ಆಪರೇಟಿಂಗ್ ವಿಧಾನವನ್ನು ಅನುಸರಿಸಿ		2	1	1
	PC 7. ಹಾರ್ಡ್‌ವೇರ್ ಸಾಧನಗಳ ಪ್ರತಿಯೊಂದು ಮಾದರಿಯನ್ನು ಇನ್ಸ್ಟಾಲ್ ಮಾಡಲು ಸ್ಟ್ಯಾಂಡರ್ಡ್ ಆಪರೇಟಿಂಗ್ ವಿಧಾನವನ್ನು ಅನುಸರಿಸಿ		2	1	1
	PC 8. ಗ್ರಾಹಕರ ಆದ್ಯತೆಯ ಸ್ಥಳದಲ್ಲಿ ಸಿಸ್ಟಮ್ ಅನ್ನು ಇರಿಸಿ		2	1	1
	PC 9. ಪ್ರಮಾಣಿತ ಕಾರ್ಯಾಚರಣಾ ವಿಧಾನದ (ಸ್ಟ್ಯಾಂಡರ್ಡ್ ಆಪರೇಟಿಂಗ್ ವಿಧಾನ) ಪ್ರಕಾರ ಹಾರ್ಡ್‌ವೇರ್ / ಸಾಧನಗಳನ್ನು ಸ್ಥಾPC		2	1	1
	PC 10. ಅನುಸ್ಥಾಪನಾ ಕೈಪಿಡಿಯ ಪ್ರಕಾರ ಸೂಕ್ತ ಸಾಧನ ಮತ್ತು ಮಾದರಿ ನಿರ್ದಿಷ್ಟ ವಿಧಾನವನ್ನು ಅನುಸರಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಿ		2	1	1
	PC 11. ಸ್ಟ್ಯಾಂಡರ್ಡ್ ಆಪರೇಟಿಂಗ್ ವಿಧಾನವನ್ನು ಅನುಸರಿಸುವ ಮೂಲಕ ವಸ್ತು ನಿರ್ವಹಣೆಯ ಸಮಯದಲ್ಲಿ ಶೂನ್ಯ-ವಸ್ತು ದೋಷವನ್ನು ಕಾಪಾಡಿಕೊಳ್ಳಿ		2	1	1
	PC 12. ಇನ್ಸ್ಟಾಲೇಷನ್ ಮಾನ್ಯುಯಲ್ ಪ್ರಕಾರ ಉಪಕರಣಗಳು ಮತ್ತು ಕೈಪಿಡಿಗಳನ್ನು ಒಯ್ಯಿರಿ		1	0	1
	PC 13. ಗ್ರಾಹಕರ ಬಾಹ್ಯ ಅವಶ್ಯಕತೆಗಳನ್ನು ಅರ್ಥಮಾಡಿಕೊಳ್ಳಿ ಮತ್ತು ಎಲ್ಲಾ ಹಾರ್ಡ್‌ವೇರ್ ಗಳು ಲಭ್ಯವಿದೆಯೆ ಎಂದು ಖಚಿತಪಡಿಸಿಕೊಳ್ಳಿ		3	1	2
	PC 14. ಗ್ರಾಹಕರ ಆದ್ಯತೆಗಳ ಪ್ರಕಾರ ಬಾಹ್ಯ ಸಾಧನಗಳಾದ ಪ್ರಿಂಟರ್ ಗಳು, ಮೋಡೆಮ್ ಮುಂತಾದವುಗಳನ್ನು ಇಡುವ ಜಾಗಗಳನ್ನು ತಿಳಿದುಕೊಳ್ಳಿ.		3	1	2

	PC 15. ಪ್ರತಿ ಸಾಧನಗಳಿಗೆ ಸ್ಟ್ಯಾಂಡರ್ಡ್ ಆಪರೇಟಿಂಗ್ ವಿಧಾನದ ಪ್ರಕಾರ ಬಾಹ್ಯ ಸಾಧನಗಳನ್ನು ಸಿಸ್ಟಮ್ ನೊಂದಿಗೆ ಸಂಪರ್ಕಪಡಿಸಿ.		4	2	2
	PC 16. ಪ್ರಿಂಟರ್, ಸ್ಕ್ಯಾನರ್‌ನಂತಹ ಸೂಕ್ತವಾದ ಪೆರಿಫೆರಲ್‌ಗಳನ್ನು ಸಿಸ್ಟಮ್‌ಗೆ ಸಂಪರ್ಕಪಡಿಸಿ ಮತ್ತು ಇನ್ಸ್ಟಾಲ್ ಮಾಡಲು ಬೇಕಾದ ಪ್ರೋಗ್ರಾಂ ಅನ್ನು ಚಲಾಯಿಸಿ.		4	2	2
	PC 17. ಉಪಕರಣಗಳನ್ನು ನಿರ್ವಹಿಸುವಾಗ ಮತ್ತು ಸ್ಥಾಪಿಸುವಾಗ ಸುರಕ್ಷತಾ ಕಾರ್ಯವಿಧಾನಗಳನ್ನು ಅನುಸರಿಸಿ		4	2	2
	PC 18. ಪೆರಿಫೆರಲ್‌ಗಳನ್ನು ಸ್ಟ್ಯಾಂಡರ್ಡ್ ಆಪರೇಟಿಂಗ್ ಕಾರ್ಯವಿಧಾನಗಳ ಪ್ರಕಾರ ಇನ್ಸ್ಟಾಲ್ ಮತ್ತು ಕಾನ್ಫಿಗರ್ ಮಾಡಿ		4	2	2
	PC 19. ಗ್ರಾಹಕರ ಅಗತ್ಯಕ್ಕೆ ಅನುಗುಣವಾಗಿ ಪೆರಿಫೆರಲ್‌ಗಳ ನಿಯೋಜನೆಯನ್ನು ಖಚಿತಪಡಿಸಿಕೊಳ್ಳಿ		3	1	2
	PC 20. ಗ್ರಾಹಕರ ಆದ್ಯತೆಗೆ ಅನುಗುಣವಾಗಿ ಆಪರೇಟಿಂಗ್ ಸಿಸ್ಟಮ್ ಮತ್ತು ಸೂಕ್ತ ಅಪ್ಲಿಕೇಶನ್ ಸಾಫ್ಟ್‌ವೇರ್ ಅನ್ನು ಇನ್ಸ್ಟಾಲ್ ಮಾಡಿ.		5	2	3
	PC 21. ಗ್ರಾಹಕರ ಸಾಮಾನ್ಯ ಅಗತ್ಯಕ್ಕೆ ಅನುಗುಣವಾಗಿ ಹೆಚ್ಚುವರಿ ಸಾಫ್ಟ್‌ವೇರ್ ಅನ್ನು ಇನ್ಸ್ಟಾಲ್ ಮಾಡಿ		5	2	3
	PC 23. ಸಿಸ್ಟಮ್ ಮತ್ತು ಪೆರಿಫೆರಲ್‌ಗಳ ಸ್ವಿಚ್ ಆನ್ ಮಾಡಿ ಮತ್ತು ಪರಿಣಾಮಕಾರಿ ಕಾರ್ಯನಿರ್ವಹಣೆಯನ್ನು ಪರಿಶೀಲಿಸಿ		2	1	1
	PC 24. ಸಿಸ್ಟಮ್, ಪೆರಿಫೆರಲ್ಸ್ ಮತ್ತು ಅಪ್ಲಿಕೇಶನ್‌ಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿವೆಯೇ ಎಂದು ಪರಿಶೀಲಿಸಿ ಮತ್ತು ಖಚಿತಪಡಿಸಿಕೊಳ್ಳಿ		3	1	2
	PC 25. ಇನ್ಸ್ಟಾಲೇಷನ್ ಮಾನ್ಯುಯಲ್ ಪ್ರಕಾರ ಹಾರ್ಡ್‌ವೇರ್, ಸಾಫ್ಟ್‌ವೇರ್, ಆಪರೇಟಿಂಗ್ ಸಿಸ್ಟಮ್ ಮತ್ತು ಪೆರಿಫೆರಲ್ ಡಿವೈಸ್ ಗಳನ್ನು ಪರೀಕ್ಷಿಸಿ ಮತ್ತು ಗ್ರಾಹಕರಿಗೆ ಡೆಮೊ ನೀಡಿ.		3	1	2
	PC 26. ಗ್ರಾಹಕರು ತೃಪ್ತರಾಗಿದ್ದಾರೆ ಎಂದು ಖಚಿತಪಡಿಸಿಕೊಳ್ಳಿ		2	1	1
	PC 27. ಮಾನದಂಡದ ವಿರುದ್ಧ ಮಲ್ಟಿಪಾರ್ಟ್ ಕರೆಗಳ ಮಟ್ಟವನ್ನು ಅಳೆಯಿರಿ ಮತ್ತು ಪೂರೈಸಿಕೊಳ್ಳಿ		2	1	1
	PC 28. ಒಪ್ಪಿದ ಸಮಯದೊಳಗೆ (ಟರ್ನ್ ಅರೌಂಡ್ ಟೈಮ್ (TAT)) ಇನ್ಸ್ಟಾಲೇಷನ್ ಅನ್ನು ಪೂರ್ಣಗೊಳಿಸಿ		3	1	2
	PC 29. ಒಂದೇ ಭೇಟಿಯಲ್ಲಿ ಕರೆ ಮುಚ್ಚುವಿಕೆಯನ್ನು ಪೂರ್ಣಗೊಳಿಸಿ		3	1	2
	PC 30. ಕಂಪನಿಯ ಗುಣಮಟ್ಟದ ಮಾನದಂಡದ ನಿಯಮಾವಳಿಗಳ ಪ್ರಕಾರ ಕಾರ್ಯವನ್ನು ಪೂರ್ಣಗೊಳಿಸಿ		2	1	1
	PC 31. ಗ್ರಾಹಕರ ಅವಶ್ಯಕತೆ ಮತ್ತು ಅವರಿಗೆ ಇರುವ ಹಾರ್ಡ್‌ವೇರ್ ಮೇಲಿನ ಪ್ರಶ್ನೆಗಳನ್ನು ಅರ್ಥಮಾಡಿಕೊಳ್ಳಿ		2	1	1
	PC 32. ಹಾರ್ಡ್‌ವೇರ್ ಕಾರ್ಯಾಚರಣೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನಗಳ ಬಗ್ಗೆ ಗ್ರಾಹಕರಿಗೆ ತಿಳಿಸಿ		1	0	1
	PC 33. ಹಾರ್ಡ್‌ವೇರ್ ಸಾಧನಗಳಲ್ಲಿ ವಾರಂಟಿ, ಇತರ ನಿಯಮಗಳು ಮತ್ತು ಷರತ್ತುಗಳ ಬಗ್ಗೆ ಗ್ರಾಹಕರಿಗೆ ತಿಳಿಸಿ		1	0	1
	PC 34. ಯಾವುದೇ ಇತರ ಹೊಸ ಇನ್ಸ್ಟಾಲೇಷನ್ ವೆಚ್ಚದ ಅಂದಾಜುಗಳ ಬಗ್ಗೆ ತಿಳಿಸಿ		2	1	1
	PC 35. ಹಾರ್ಡ್‌ವೇರ್ ಸಾಧನಗಳು, ಆಪರೇಟಿಂಗ್ ಕಾರ್ಯವಿಧಾನ, ನಿರ್ವಹಣೆ ಇತ್ಯಾದಿಗಳ ಬಗ್ಗೆ ಸಾಕಷ್ಟು ಮಾಹಿತಿಯನ್ನು ಗ್ರಾಹಕರಿಗೆ ಒದಗಿಸಿ		1	0	1
	PC 36. ಡಿವೈಸ್ ನ ಬಗ್ಗೆ ಗ್ರಾಹಕರು ಎತ್ತಿದ ಪ್ರಶ್ನೆಗಳು ಮತ್ತು ಸಮಸ್ಯೆಗಳನ್ನು ಪರಿಹರಿಸಿ		1	0	1
	PC 37. ವಾರಂಟಿ ಮತ್ತು ಉತ್ಪನ್ನ ನಿಯಮಗಳು ಮತ್ತು ಷರತ್ತುಗಳ ಬಗ್ಗೆ ಗ್ರಾಹಕರಿಗೆ ಸ್ಪಷ್ಟವಾಗಿ ತಿಳಿಸಿ		1	0	1

	PC 38. ಇನ್ವಾಯ್ಸ್ ಸೇರಿದಂತೆ ಎಲ್ಲಾ ಸೂಕ್ತ ದಾಖಲೆಗಳನ್ನು ಗ್ರಾಹಕರಿಗೆ ಒದಗಿಸಿ		1	0	1
	PC 39. ಕಾಲ ಕಾಲಕ್ಕೆ ಮೇಲಧಿಕಾರಿಗಳಿಂದ ಕೆಲಸದ ಅವಶ್ಯಕತೆಯನ್ನು ಕೇಳಿ ತಿಳಿದು ಅರ್ಥಮಾಡಿಕೊಳ್ಳಿ		1	0	1
	PC 40. ಪೂರ್ಣಗೊಂಡ ಕೆಲಸದ ಕುರಿತು ಮೇಲಧಿಕಾರಿಗಳಿಗೆ ವರದಿ ಮಾಡಿರಿ.		1	0	1
	PC 41. ಫೀಲ್ಡ್ ಲೆವೆಲ್ ನಲ್ಲಿ ನಿಭಾಯಿಸಲಾಗದ ಗ್ರಾಹಕರ ಸಮಸ್ಯೆಗಳನ್ನು ಮೇಲಾಧಿಕಾರಿಗಳಿಗೆ ತಿಳಿಸಿ.		2	1	1
	PC 42. ಪೂರ್ಣಗೊಂಡ ಕೆಲಸವನ್ನು ಕಂಪನಿಯ ERP ಸಾಫ್ಟ್‌ವೇರ್‌ನಲ್ಲಿ ದಾಖಲಿಸಿ. ಇದರಿಂದ ಮುಂದೆಂದಾದರೂ ಟ್ರಾಕ್ ಮಾಡಲು ಮತ್ತು ಇತರೆ ರೆಫೆರೆನ್ಸ್‌ಗಳಿಗೆ ಸಹಾಯವಾಗುತ್ತದೆ.		1	0	1
	PC 43. ನೀವು ಒಪ್ಪಿಕೊಂಡ ಗುರಿ ಮತ್ತು ಸಮಯದ ಒಳಗೆ 100% ಕಾರ್ಯ ಪೂರ್ಣಗೊಳಿಸಿ.		3	2	1
	PC 44. ಪ್ರಾಡಕ್ಟ್ ಇನ್ಸ್ಟಾಲೇಷನ್ ಗೆ ಸಂಬಂಧಿಸಿದಂತೆ ಗ್ರಾಹಕರ ತೃಪ್ತಿ ಮಟ್ಟದ ಫೀಡ್ಬ್ಯಾಕ್ ಫಾರ್ಮ್ ಅನ್ನು ಸಲ್ಲಿಸಿ		3	2	1
	PC 45. ಫೀಲ್ಡ್ ನಲ್ಲಿ ಬಗೆಹರಿಯದ ಗ್ರಾಹಕರ ದೂರುಗಳು ಮತ್ತು ಪ್ರಶ್ನೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಿ		2	1	1
	PC 46. ಕೆಲಸದ ಸ್ಥಿತಿಯನ್ನು ವರದಿ ಮಾಡಿ ಮತ್ತು ಕಂಪನಿಯ ಮಾನದಂಡಗಳ ಪ್ರಕಾರ ವರದಿ ತಯಾರಿಸಿ		2	1	1
		ಒಟ್ಟು	**100**	**40**	**60**
3. ELE/N4603 ದೋಷಯುಕ್ತ ಮಾಡ್ಯೂಲ್ ಅನ್ನು ನಿವಾರಿಸಿ ಮತ್ತು ಬದಲಾಯಿಸಿ	PC 1. ಗ್ರಾಹಕ ಕಾಳಜಿ ಕೇಂದ್ರ (ಕಸ್ಟಮರ್ ಕೇರ್) ದಲ್ಲಿ ಗ್ರಾಹಕರು ನೋಂದಾಯಿಸಿದ ಸಮಸ್ಯೆಗಳನ್ನು ಎಚ್ಚರಿಕೆಯಿಂದ ಆಲಿಸಿ	**100**	3	1	2
	PC 2. ಗ್ರಾಹಕರ ಭೇಟಿಯ ಮೊದಲು ಸಮಸ್ಯೆಯನ್ನು ಇನ್ನು ಸರಿಯಾಗಿ ತಿಳಿಯಲು ದೂರವಾಣಿಯಲ್ಲಿ ಗ್ರಾಹಕರೊಂದಿಗೆ ಮಾತುಕತೆ ನಡೆಸಿ		3	1	2
	PC 3. ದೂರಿನ ಪ್ರಕಾರವನ್ನು ಆಧರಿಸಿ ಹೊರಡಿರಿ.		2	1	1
	PC 4. ದೋಷನಿವಾರಣೆಯ ಸೂಚನೆಗಳ ಇನ್ಸ್ಟ್ರಕ್ಷನ್ ಶೀಟ್ ಒಯ್ಯಿರಿ		3	1	2
	PC 5. ಉತ್ಪನ್ನಕ್ಕೆ ಸಂಬಂಧಿಸಿದಂತೆ ಖಾತರಿ, ನಿಯಮಗಳು ಮತ್ತು ಷರತ್ತುಗಳನ್ನು ಅರ್ಥಮಾಡಿಕೊಳ್ಳಿ		3	1	2
	PC 6. ಯಾವ ತರಹದ ಸಮಸ್ಯೆ ಎಂದು ಗುರುತಿಸಿ ಮತ್ತು ಅದಕ್ಕೆ ಸಂಬಂಧಿತ ಪರಿಕರಗಳು (ಇಕ್ವಿಪ್ಮೆಂಟ್) , ಸಲಕರಣೆ (ಟೂಲ್) ಪ್ರಮಾಣಿತ ಕಾರ್ಯಾಚರಣಾ ವಿಧಾನವನ್ನು (ಸ್ಟ್ಯಾಂಡರ್ಡ್ ಆಪರೇಟಿಂಗ್ ಪ್ರೊಸೀಜರ್) ಒಯ್ಯಿರಿ.		3	1	2
	PC 7. ಮಾಡ್ಯೂಲ್ ಬದಲಿಸಬೇಕೇ ಅಥವಾ ಕೇವಲ ದುರಸ್ತಿ ಅಗತ್ಯವಿದೆಯೇ ಎಂದು ನಿರ್ಣಯಿಸಿ		3	1	2
	PC 8. 100% ಅನುಮೋದಿತ ಮತ್ತು ಪರಿಶೀಲಿಸಿದ ಬಿಡಿ ಭಾಗಗಳನ್ನು ಮಾತ್ರ ದುರಸ್ತಿ ಮಾಡಲು ಅಥವಾ ಬದಲಿಸಲು ಒಯ್ಯಿರಿ.		2	1	1
	PC 9. ದುರಸ್ತಿ ಕೆಲಸವನ್ನು ಫೀಲ್ಡ್ ನಲ್ಲಿಯೇ ಅಥವಾ ಕಂಪನಿಯ ಪರೀಕ್ಷಾ ಕೇಂದ್ರದಲ್ಲಿ ಸರಿಪಡಿಸಬೇಕೇ ಎಂದು ನಿರ್ಧರಿಸಿ		3	1	2
	PC 10. ಗ್ರಾಹಕರು ಅನುಭವಿಸಿದ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಿ		2	1	1
	PC 11. ಸಾಮಾನ್ಯವಾಗಿ ಸಿಸ್ಟಮ್ ಪ್ರಾರಂಭವಾಗದ ಸಂಧರ್ಭದಲ್ಲಿ ದೋಷಗಳು ಮತ್ತು ಸಮಸ್ಯೆಗಳನ್ನು ಗುರುತಿಸಲು 'ಪವರ್ ಆನ್ ಸೆಲ್ಫ್ ಟೆಸ್ಟ್' (POST) ಕಾರ್ಡ್‌ನಂತಹ ಸಾಧನಗಳನ್ನು ಬಳಸಿ		3	1	2
	PC 12. ಮೂಲ ಕಾರಣ ವಿಶ್ಲೇಷಣೆ (ರೂಟ್ ಕಾಸ್ ಅನಾಲಿಸಿಸ್) ನಡೆಸಿ ಮತ್ತು ಸಮಸ್ಯೆಯ ಪ್ರದೇಶವನ್ನು ಗುರುತಿಸಿ		3	1	2
	PC 13. ವಿಫಲವಾದ ಮಾಡ್ಯೂಲ್ ಅನ್ನು ಪ್ರತ್ಯೇಕಿಸಲು SMPS, ಮೆಮೊರಿ, ಹಾರ್ಡ್ ಡಿಸ್ಕ್ನಂತಹ ಕಂಪ್ಯೂಟಿಂಗ್ ವ್ಯವಸ್ಥೆಯ ಪ್ರತಿಯೊಂದು ಭಾಗವನ್ನು ಬಿಚ್ಚಿರಿ (ಡಿಸ್ ಅಸ್ಸೆಂಬಲ್) ಮತ್ತು ಪರಿಶೀಲಿಸಿ		3	1	2

	PC 14. PCBಯನ್ನು ESD ಮಾನದಂಡಗಳೊಂದಿಗೆ ಕೆಲಸ ನಿರ್ವಹಿಸುವಾಗ ಹಾರ್ಡ್‌ವೇರ್ ಮಾಡ್ಯೂಲ್‌ಗಳನ್ನು ನಿರ್ವಹಿಸುವಾಗ ಸ್ಟ್ಯಾಂಡರ್ಡ್ ಆಪರೇಟಿಂಗ್ ವಿಧಾನವನ್ನು ಅನುಸರಿಸಿ		3	1	2
	PC 15. ಪೆರಿಫೆರಲ್‌ಗಳ ದುರಸ್ತಿ ಸಂದರ್ಭದಲ್ಲಿ ದೋಷಯುಕ್ತ ಮಾಡ್ಯೂಲ್ ಅನ್ನು ಪ್ರತ್ಯೇಕಿಸಲು ಪ್ರಿಂಟ್ ಹೆಡ್, ಲೆನ್ಸ್, LED ಡಿಸ್ಪ್ಲೇ ನಂತಹ ಎಲ್ಲಾ ಭಾಗಗಳನ್ನು ಪರಿಶೀಲಿಸಿ.		3	1	2
	PC 16. ಭಾಗವನ್ನು ಬದಲಾಯಿಸಬಹುದೇ ಅಥವಾ ಸರಿಪಡಿಸಬೇಕೆ ಎಂಬ ಬಗ್ಗೆ ನಿರ್ಧಾರ ತೆಗೆದುಕೊಳ್ಳಿ		3	1	2
	PC 17. ಮಾಡ್ಯೂಲ್ ಅನ್ನು ಬದಲಾಯಿಸಬೇಕೆ ಅಥವಾ ಸಾಫ್ಟ್‌ವೇರ್ ಅನ್ನು ಇನ್ಸ್ಟಾಲ್ ಮಾಡಬೇಕೆ ಅಥವಾ ನವೀಕರಿಸಬೇಕೆ ಎಂದು ನಿರ್ಧಾರ ತೆಗೆದುಕೊಳ್ಳಲು ಕಲಿಯಿರಿ		3	1	2
	PC 18. ಮಾಡ್ಯೂಲ್ ಅನ್ನು ಬದಲಾಯಿಸಬೇಕೆ ಅಥವಾ ದುರಸ್ತಿ ಕೇಂದ್ರಕ್ಕೆ ಕಳುಹಿಸಬೇಕೆ ಎಂದು ನಿರ್ಧರಿಸಿ		2	1	1
	PC 19. ಮಾಡ್ಯೂಲ್ ಅನ್ನು ಬದಲಾಯಿಸಬೇಕಾದರೆ, ಸಿಸ್ಟಮ್ ಅನ್ನು ಡಿಸ್‌ಅಸೆಂಬಲ್ ಮಾಡಿ ಮಾಡ್ಯೂಲ್ ತೆಗೆದುಹಾಕಿ ಮತ್ತು ಬದಲಾಯಿಸಿದ ನಂತರ ಸಿಸ್ಟಮ್ ಅನ್ನು ಮತ್ತೆ ಜೋಡಿಸಿ		2	1	1
	PC 20. ಭಾಗಗಳಿಗೆ ಬೆಸುಗೆ ಹಾಕುವ ಅಗತ್ಯವಿದ್ದರೆ, ಬೆಸುಗೆ ಹಾಕಲು ಮ್ಯಾನುಯಲ್ ಕೈ ಬೆಸುಗೆ ಹಾಕುವ ಸಾಧನ ಬಳಸಿ		3	1	2
	PC 21. ಯಾವುದೇ ಸಾಫ್ಟ್‌ವೇರ್ ಸಂಬಂಧಿತ ಸಮಸ್ಯೆ, ಆಪರೇಟಿಂಗ್ ಸಿಸ್ಟಮ್ ದೋಷ ಇದ್ದರೆ ಸಾಫ್ಟ್‌ವೇರ್ ಅನ್ನು ಮತ್ತೆ ಇನ್ಸ್ಟಾಲ್ ಮಾಡಿ ಸಮಸ್ಯೆ ಬಗೆಹರಿಸುವುದು		3	1	2
	PC 22. ಪೆರಿಫೆರಲ್‌ಗಳು ಮತ್ತು ನೆಟ್‌ವರ್ಕಿಂಗ್ ಸಾಧನಗಳು ಎದುರಿಸುತ್ತಿರುವ ಸಾಮಾನ್ಯ ಸಮಸ್ಯೆಗಳನ್ನು ಪರಿಹರಿಸಿ		3	1	2
	PC 23. ಫೀಲ್ಡ್ ಲೆವೆಲ್ ನಲ್ಲಿ ನಿಭಾಯಿಸಲಾಗದ ಗ್ರಾಹಕರ ಸಮಸ್ಯೆಗಳನ್ನು ಕಂಪನಿಯ ದುರಸ್ತಿ ಕೇಂದ್ರದಲ್ಲಿ ಬಗೆಹರಿಸಲು ಮೇಲಾಧಿಕಾರಿಗಳಿಗೆ ತಿಳಿಸಿ ಪರಿಹರಿಸಿ.		2	1	1
	PC 24. ಫೀಲ್ಡ್ ನಲ್ಲಿ ಯಾವುದೇ ಸಹಾಯ ಪಡೆಯಲು ರಿಮೋಟ್ ಟೆಕ್ನಿಕಲ್ ಹೆಲ್ಪ್ ಡೆಸ್ಕ್ ನೊಂದಿಗೆ ಸಂಪರ್ಕಿಸಿ.		2	1	1
	PC 25. ಬೆಸುಗೆ ಹಾಕುವ ಕಬ್ಬಿಣದಂತಹ ಸಾಧನಗಳನ್ನು ನಿರ್ವಹಿಸುವಾಗ ಸೂಕ್ತವಾದ ಸುರಕ್ಷತಾ ವಿಧಾನಗಳನ್ನು ಅನುಸರಿಸಿ		3	2	1
	PC 26. ಹೊಸ ಹಾರ್ಡ್‌ವೇರ್ ಮಾಡ್ಯೂಲ್‌ಗಳು ಅಥವಾ ಸಾಫ್ಟ್‌ವೇರ್ ಇನ್ಸ್ಟಾಲ್ ಮಾಡಿದ ನಂತರ 100% ಸರಿಯಾಗಿ ಕಾರ್ಯ ನಿರ್ವಹಿಸುತ್ತಿದೆಯೇ ಎಂದು ಪರೀಕ್ಷಿಸಿ		2	1	1
	PC 27. ಫೀಲ್ಡ್ ಭೇಟಿಯ ಮೊದಲು ಕೆಲಸವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಿ		2	1	1
	PC 28. ಅನೇಕ ಸ್ಥಳಗಳಿಗೆ ಒಮ್ಮೆಯೇ ಭೇಟಿ ನೀಡುವಾಗ ಎಷ್ಟು ದುರಸ್ತಿ ಕಾಲ್ ಗಳನ್ನು ಮುಗಿಸಲಾಗಿದೆ ಎಂದು ಶೇಕಡಾವಾರು ವರದಿ ನೀಡಿ.		1	1	0
	PC 29. ಭಾಗಗಳನ್ನು ಬದಲಿಸುವ ಸಂದರ್ಭಗಳಲ್ಲಿ ಯಾವುದೇ ಕೆಟ್ಟ ಗುಣಮಟ್ಟದ ಅಥವಾ ಪರಿಶೀಲಿಸದ ಭಾಗಗಳನ್ನು ನೀವು ಉಪಯೋಗಿಸುತ್ತಿಲ್ಲ ಎಂದು ಖಚಿತಪಡಿಸಿಕೊಳ್ಳಿ.		2	1	1
	PC 30. ಒಪ್ಪಿದ ಟರ್ನ್ ಅರೌಂಡ್ ಟೈಮ್ (TAT–ಟಿಎಟಿ) ಒಳಗೆ ಕಾರ್ಯವನ್ನು ಪೂರ್ಣಗೊಳಿಸಿ		2	1	1
	PC 31. ಒಂದೇ ಭೇಟಿಯಲ್ಲಿ ನಿಮಗೆ ವಹಿಸಿದ ಎಲ್ಲ ಫೀಲ್ಡ್ ಭೇಟಿಯನ್ನು ಪೂರ್ಣಗೊಳಿಸಿ		1	1	0
	PC 32. ಕಂಪನಿಯ ಗುಣಮಟ್ಟದ ಮಾನದಂಡದೊಂದಿಗೆ ಕಾರ್ಯವನ್ನು ಪೂರ್ಣಗೊಳಿಸಿ		1	1	0
	PC 33. ನೀಡಲಾದ ಮಾಸಿಕ ಅಥವಾ ದೈನಂದಿನ ಗುರಿಯನ್ನು ಪೂರೈಸುವುದು		1	1	0
	PC 34. ಸಮಸ್ಯೆಯ ಬಗ್ಗೆ ಗ್ರಾಹಕರಿಗೆ ತಿಳಿಸಿ ಹಾಗು ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ವಿವರಿಸಿ.		1	0	1
	PC 35. ಹಾರ್ಡ್‌ವೇರ್ ಸಾಧನ ಅಥವಾ ಸಾಫ್ಟ್‌ವೇರ್ ಬಗ್ಗೆ ಸಾಕಷ್ಟು ಮಾಹಿತಿಯನ್ನು ಗ್ರಾಹಕರಿಗೆ ತಿಳಿಸಿ		2	1	1
	PC 36. ಸಿಸ್ಟಮ್ ಅಥವಾ ಹಾರ್ಡ್‌ವೇರ್ ಅನ್ನು ನಿರ್ವಹಿಸಲು ಅನುಸರಿಸಬೇಕಾದ ಕಾರ್ಯವಿಧಾನಗಳ ಬಳಕೆಯನ್ನು ಗ್ರಾಹಕರಿಗೆ ಸೂಚಿಸಿ		2	1	1

	PC 37. ಮಾಡ್ಯೂಲ್ ಅನ್ನು ಬದಲಿಸುವ ಮೊದಲು ಅಥವಾ ಕಂಪನಿಗೆ ರಿಪೇರಿಗಾಗಿ ಕಳುಹಿಸುವ ಮೊದಲು ಗ್ರಾಹಕರ ಸ್ವೀಕಾರವನ್ನು ದೃಢೀಕರಿಸಿ.		1	1	0
	PC 38. ಬದಲಾದ ಅಥವಾ ರಿಪೇರಿ ಮಾಡಿದ ಹಾರ್ಡ್‌ವೇರ್ ಸಾಧನಗಳಲ್ಲಿ ವಾರಂಟಿ, ಇತರ ನಿಯಮಗಳು ಮತ್ತು ಷರತ್ತುಗಳ ಬಗ್ಗೆ ಗ್ರಾಹಕರಿಗೆ ತಿಳಿಸಿ		2	1	1
	PC 39. ಕೆಲಸ ಮುಗಿದ ನಂತರ ಗ್ರಾಹಕರಿಗೆ ಸಂಬಂಧಿಸಿದ ದಾಖಲೆಗಳನ್ನು ಅವರಿಗೆ ಒದಗಿಸಿ		1	0	1
	PC 40. ಮಾರಾಟ ನಂತರದ ಸೇವೆಯಲ್ಲಿ ಗ್ರಾಹಕರೊಂದಿಗೆ 100% ಸಂತೃಪ್ತಿಯನ್ನು ಸಾಧಿಸಿ		1	0	1
	PC 41. ನೋಂದಾಯಿತ ದೂರಿನ ಬಗ್ಗೆ ಮೇಲಧಿಕಾರಿಗಳಿಂದ ಅಥವಾ ಗ್ರಾಹಕ ಕಾಳಜಿ ಕೇಂದ್ರ (ಕಸ್ಟಮರ್ ಕೇರ್) ದಿಂದ ಕೆಲಸದ ಆದೇಶವನ್ನು (ವರ್ಕ್ ಆರ್ಡರ್) ಸ್ವೀಕರಿಸಿ		2	1	1
	PC 42. ಕೆಲಸದ ಮಟ್ಟ ಮತ್ತು ಪೂರ್ಣಗೊಳಿಸುವಿಕೆಯ ಸ್ಥಿತಿಯ ಕುರಿತು ವರದಿ ಮಾಡಿ		1	0	1
	PC 43. ಫೀಲ್ಡ್ ನಲ್ಲಿ ಬಗೆಹರಿಯದ ಗ್ರಾಹಕರ ದೂರುಗಳು ಮತ್ತು ಪ್ರಶ್ನೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಿ		2	1	1
	PC 44. ಫೀಲ್ಡ್ ಮಟ್ಟದಲ್ಲಿ ಪರಿಹರಿಸಲಾಗದ ಸಮಸ್ಯೆಗಳನ್ನು ಮೇಲಾಧಿಕಾರಿಗಳಿಗೆ ಕಾರಣ ಸಹಿತ ವಿವರಿಸಿ.		1	0	1
	PC 45. ಫೀಲ್ಡ್ ದುರಸ್ತಿ 100% ಸಮಯಕ್ಕೆ ಪೂರ್ಣಗೊಂಡ ಬಗ್ಗೆ ಅಥವಾ ಒಪ್ಪಿದ ಗುರಿ ಮತ್ತು ಸಮಯದ ಪ್ರಕಾರ ಹಾರ್ಡ್‌ವೇರ್ ಬದಲಿಸಿದ ಸಂಧರ್ಭದಲ್ಲಿ ಅಥವಾ ಗುರಿಯನ್ನು ಪೂರೈಸದ ಸಂಧರ್ಭದಲ್ಲಿ ಸೂಕ್ತ ಕಾರಣಗಳೊಂದಿಗೆ ಮೇಲ್ವಿಚಾರಕರಿಗೆ ವರದಿ ಮಾಡಿ		1	0	1
	PC 46. ದುರಸ್ತಿಗೆ ಸಂಬಂಧಿಸಿದಂತೆ ಗ್ರಾಹಕರ ತೃಪ್ತಿ ಮಟ್ಟ ತಿಳಿಯಲು ಪ್ರತಿಕ್ರಿಯೆ (ಫೀಡ್ ಬ್ಯಾಕ್) ಫಾರ್ಮ್ ಅನ್ನು ಸಲ್ಲಿಸಿ		1	0	1
	PC 47. ಕಂಪನಿಯ ಮಾನದಂಡಗಳ ಪ್ರಕಾರ ಸರಿಯಾದ ದಾಖಲಾತಿಗಳ ಸಹಾಯದಿಂದ ಕೆಲಸದ ನಿಜ ಸ್ಥಿತಿಯನ್ನು ನಿಖರವಾಗಿ ವರದಿ ಮಾಡಿ		1	0	1
	PC 48. ನೀವು ಮಾಡಿದ ಕಠಿಣವಾದ ರಿಪೇರಿ ಕುರಿತು ಜ್ಞಾನ ಬ್ಯಾಂಕ್ ವರದಿ ಅನ್ನು ರಚಿಸಿ		1	0	1
		ಒಟ್ಟು	**100**	**40**	**60**
4. ELE/N9909 ಸಹೋದ್ಯೋಗಿಗಳೊಂದಿಗೆ ಅನ್ಯೋನ್ಯವಾಗಿರುವುದು	PC 1. ಕೆಲಸದ ಅವಶ್ಯಕತೆಗಳನ್ನು ಅರ್ಥಮಾಡಿಕೊಳ್ಳಿ ಮತ್ತು ನಿರ್ಣಯಿಸಿ	**100**	5	2	3
	PC 2. ನಿಮಗೆ ನೀಡುವ ಕೆಲಸದ ಗುರಿಗಳು (ಟಾರ್ಗೆಟ್) ಮತ್ತು ಪ್ರೋತ್ಸಾಹ ಧನ (ಇನ್ಸೆಂಟಿವ್) ಗಳನ್ನು ಅರ್ಥಮಾಡಿಕೊಳ್ಳಿ		5	2	3
	PC 3. ಹೊಸ ಕಾರ್ಯಾಚರಣಾ ವಿಧಾನಗಳು ಮತ್ತು ನಿರ್ಬಂಧಗಳನ್ನು ಅರ್ಥಮಾಡಿಕೊಳ್ಳಿ		5	2	3
	PC 4. ಫೀಲ್ಡ್ ಸಮಸ್ಯೆಗಳನ್ನು ವರದಿ ಮಾಡಿ		5	2	3
	PC 5. ಸಹ ಸಿಬ್ಬಂದಿಗಳ ಸಮಸ್ಯೆಗಳನ್ನು ಪರಿಹರಿಸಿ		5	2	3
	PC 6. ಕೆಲಸದ ಮಟ್ಟ ಮತ್ತು ಗ್ರಾಹಕರ ತೃಪ್ತಿಯ ಕುರಿತು ಪ್ರತಿಕ್ರಿಯೆ (ಫೀಡ್ ಬ್ಯಾಕ್) ಸ್ವೀಕರಿಸಿ		5	2	3
	PC 7. ಕೆಲ ಸಂಧರ್ಭಗಳಲ್ಲಿ ನಿರ್ದಿಷ್ಟ ಸ್ಥಳದಲ್ಲಿ ಯಾವುದಾದರೂ ಸಂಭಾವ್ಯ ಅಪಾಯಗಳು ನಿಮಗೆ ಕಂಡುಬಂದರೆ ಅಂತಹ ವಿಷಯ ತಿಳಿಸಿ.		5	2	3
	PC 8. ನಿರ್ದಿಷ್ಟ ಗುರಿಗಳನ್ನು ಪೂರೈಸುವುದು		5	2	3
	PC 9. ಅದೇ ತಡೆಗಳ ಹೊರತಾಗಿಯೂ ನಿರೀಕ್ಷಿತ ಗುಣಮಟ್ಟದ ಕೆಲಸವನ್ನು ನೀಡುವುದು.		5	2	3
	PC 10. ನಿಮ್ಮ ನಡವಳಿಕೆ ಮತ್ತು ವರ್ತನೆಯ ಬಗ್ಗೆ ಸಕಾರಾತ್ಮಕ ಪ್ರತಿಕ್ರಿಯೆಯನ್ನು ಸ್ವೀಕರಿಸಿ		5	2	3
	PC 11. ಇತರೆ ರಂಗಗಳಲ್ಲಿ ಕೆಲಸ ಮಾಡುತ್ತಿರುವ ನಿಮ್ಮ ಸಹೋದ್ಯೋಗಿಗಳೊಂದಿಗೆ ಮಾತುಕತೆ ನಡೆಸಿ ಮತ್ತು ಅವರ ಕೆಲಸದ ಸ್ವರೂಪವನ್ನು ಅರ್ಥಮಾಡಿಕೊಳ್ಳಿ		10	4	6

	PC 12. ಸ್ಟೋರ್ ನಿಂದ ಅಥವಾ ಟೂಲ್ ರೂಮ್ ನಿಂದ ಬಿಡಿಭಾಗಗಳನ್ನು ಸ್ವೀಕರಿಸಿ; ದೋಷಯುಕ್ತ ಮಾಡ್ಯೂಲ್‌ಗಳು ಮತ್ತು ಟೂಲ್ಗಳನ್ನು ಸ್ಟೋರ್ ಗೆ ವಾಪಸ್ ನೀಡಿ.		10	4	6
	PC 13. ಗ್ರಾಹಕರ ದೂರುಗಳನ್ನು ಆಯಾ ಭೌಗೋಳಿಕ ಪ್ರದೇಶದ ಸಹೋದ್ಯೋಗಿಗಳಿಗೆ ರವಾನಿಸಿ		10	4	6
	PC 14. ಫೀಲ್ಡ್ ಸಮಸ್ಯೆಗಳನ್ನು ಪರಿಹರಿಸಲು ಸಹೋದ್ಯೋಗಿಗಳಿಗೆ ಸಹಾಯ ಮಾಡಿ, ಭಿನ್ನಾಭಿಪ್ರಾಯಗಳನ್ನು ಪರಿಹರಿಸಿ ಮತ್ತು ಕೆಲಸ ಸುಗಮವಾಗಿ ನಡೆಯುವಂತೆ ಸಾಧಿಸಿ		10	4	6
	PC 15. ಸಂಸ್ಥೆಯ ಬೇರೆ ಇಲಾಖೆಗಳೊಡನೆ ಪರಸ್ಪರ ಸಂಪರ್ಕ ನಡೆಸುವ ಸಮಯದಲ್ಲಿ ಕಂಪನಿಯ ನೀತಿಯನ್ನು ಅನುಸರಿಸಿ		10	4	6
		ಒಟ್ಟು	**100**	**40**	**60**

SANKALP
Ministry of Skill Development
& Entrepreneurship

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ

ಡೈರಿ ಸರ್ಕಲ್, ಬನ್ನೇರುಘಟ್ಟ ಮುಖ್ಯ ರಸ್ತೆ,
ಹೊಂಬೇಗೌಡ ನಗರ, ಬೆಂಗಳೂರು-560029
ಅಧಿಕೃತ ಜಾಲತಾಣ : www.kaushalkar.com